


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**12–05–2024 – ಭಾನುವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರ |
| ಯೋಗ | : ಧೃತಿ |
| ಕರಣ | : ಭವ |
| ಸೂರ್ಯೋದಯ | : 05:48:20 |
| ಸೂರ್ಯಾಸ್ತ | : 18:58:31 |
| ರಾಹು | : 17:20–18:59 |
| ಯಮಘಂಡ | : 12:23–14:02 |
| ಗುಳಿಕ | : 15:41–17:20 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 11–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.65 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 12 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.435 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.59 ಅಡಿ |
| ಒಳ ಹರಿವು | 1291 ಕ್ಯುಸೆಕ್ |
| ಹೊರ ಹರಿವು | 115 ಕ್ಯುಸೆಕ್ |
| ಸಾಮರ್ಥ್ಯ | 3.035 ಟಿಎಂಸಿ |

## ವಿದ್ಯುತ್ ತಗುಲಿ ಹಸು ಸಾವು

ಮೊದಲ ಪುಟದಿಂದ

ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ ಜೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಬಂದು ದುರಸ್ತಿ ಮಾಡಿಲ್ಲ. ಅವರ ಬೇಜವಾಬ್ದಾರಿಯಿಂದಲೇ ಈ ಘಟನೆ ನಡೆದಿದೆ ಎಂದು ಗ್ರಾಮಸ್ಥರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಟ್ರಾನ್ಸ್ ಫಾರ್ಮ್ ಸಮೀಪವೇ ಗ್ರಾಮಸ್ಥರು, ಮಕ್ಕಳು ಪ್ರತಿನಿತ್ಯ ಓಡಾಡುತ್ತಾರೆ, ಕೂಡಲೇ ಸ್ಥಳಕ್ಕೆ ಆಗಮಿಸಿ ಅನಾಹುತ ಸಂಭವಿಸುವ ಮುನ್ನ ದುರಸ್ತಿ ಕಾರ್ಯ ಮಾಡುವಂತೆ ಸಿಐಟಿಯು ತಾಲೂಕ್ ಅಧ್ಯಕ್ಷ ಕರಿಯಪ್ಪ ಹಾಗೂ ಹಸುವಿನ ಮಾಲೀಕ, ಗ್ರಾಮಸ್ಥರ ಒತ್ತಾಯಿಸಿದ್ದಾರೆ. ಸುಮಾರು 25 ಸಾವಿರಕ್ಕೂ ಹೆಚ್ಚು ಬೆಲೆ ಬಾಳುವ ಹಸು ಕಳೆದುಕೊಂಡ ರೈತನಿಗೆ ಪರಿಹಾರ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

## ಪ್ರಸಿದ್ಧಿ ಆಂಗ್ಲ ಮಾಧ್ಯಮ ಶಾಲೆ ಶೇ.100 ರಷ್ಟು ಫಲಿತಾಂಶ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:** ಪಟ್ಟಣದ ಪ್ರಸಿದ್ಧಿ ಆಂಗ್ಲ ಮಾಧ್ಯಮ ಶಾಲೆಯು, 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶದಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದಿದೆ. ಶಾಲೆಯ ವಿದ್ಯಾರ್ಥಿನಿ ಎಸ್.ಎಚ್.ಚಂದನಾ ಶೇ.97.92 ಅಂಕ ಗಳಿಸಿ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಶಾಲೆಯ ವಿದ್ಯಾರ್ಥಿಗಳಾದ ವಿಕಾಸ್ ಪಾಟೀಲ್ ಶೇ.91.36, ಕೆ.ವಿ.ಸಿಂಚನ ಶೇ.91.20, ಬಿ.ಆರ್.ಪವನ್ ಕುಮಾರ ಶೇ.91.20, ಎಚ್.ಆರ್.ಸೋಹನ್ ಶೇ.91.04, ಎಲ್.ವಿಕಾಸ್ ರಾಥೋಡ್ ಶೇ.90.88 ಗಳಿಸಿದ್ದಾರೆ ಎಂದು ಪ್ರಸಿದ್ಧಿ ಶಾಲೆಯ ಆಡಳಿತಾಧಿಕಾರಿ ಲಿಂಗು ತಿಳಿಸಿದ್ದಾರೆ.

# ಬೇಲಿ

■ **ಜಿ ಶಿವಕುಮಾರ್ ಸೋಗಿ**

(ಆವಾಗಲೆ ಮಲ್ಲವ್ವ ಒಂದು ಗಟ್ಟಿ ನಿರ್ಧಾರ ಮಾಡಿದ್ದಲು ಕಷ್ಟಕ್ಕ ಆಗದ ಜನ ಏನೆಂದರೇನು, ಮಣ್ಣಿಗೆ ಹೋಗೊ ಮೈಗೆ ಮೈಲಿಗೆಯಂತದ್ದು? ಮನಸ್ಸಿಗಿಲ್ಲದ ಶೀಲ ಮೈಗೆ ಯಾಕ? ಆಡಿಕೊಳ್ಳುವವರು ಆಡಿಕೊಳ್ಳಲಿ, ನನ್ನ ಕುಟುಂಭ ಬೀದಿಗೆ ಬಿದ್ದರೂ ಅದನ್ನೆ ಮಾಡೊ ಜನಕ್ಕ ಹೆದರಿ ಸಾಯಾಕಿ ಅಲ್ಲ ನಾನು, ತನ್ನ ಜೀವನದಲ್ಲಿ ಬಂದ ಬಿರುಗಾಳಿಯ ಹೊಡೆತದಿಂದ ತನ್ನ ಮಗ, ಮಗಳು, ಕುಟುಂಭದ ರಕ್ಷಣೆಗಾಗಿ ಮುನಿಯಪ್ಪನ ಬೇಕುಗಳಿಗೆ ವಲ್ಲದ ಮನಸ್ಸಿನಿಂದಲೆ ಒಗ್ಗಿಕೊಂಡಿದ್ದಳು.)



ತಮ್ಮ ಸಾಲಿಗುಡಿ ಹಿಂದೆ ನಿಮ್ಮಪ್ಪ ಕಣ ಮಾಡ್ಲಿಕತ್ಯಾನ ಜರ ನಿ ಹೋಗಿ ಬುತ್ತಿ ಕೊಟ್ಟ ಬಾ, ಎಷ್ಟು ಮಾಡಿದರು ಮುಗಿಯಾದಿಲ್ಲ ಈ ಬದುಕು, ಒಮ್ಮೆಗೆ ಮಣ್ಣಾಗ ಇಟ್ಟಾಗಲೆ ಕಾಣುಸುತ್ತೆ. ನನ್ನ ಹಣೆ ಬರಹಕ್ಕೆ ಯಾರಿಗೆ ಅಂದರೆ ಏನು ಬಂತು, ಎಷ್ಟು ಸಲ ಬಡಕೊಂಡೆ ಎಲ್ಲಾದರು ಒಂದು ಗೇಣು ಜಾಗ ತಗೊ ಅಂತ, ಹಿಂಗ ಅಲ್ಲೊಮ್ಮೆ ಇಲ್ಲೊಮ್ಮೆ ಬೆಕ್ಕು ವಲಿ(ಒಲೆ) ಕೆದರಿದಂಗ ನಾಕಾಳು ಅಲ್ಲಿ ಮೂರ್ಕಾಳು ಇಲ್ಲಿ ಮಾಡಿ ಕೈಗೆ ಬಂದಿದ್ದು ಬಾಯಿಗೆ ಬರದಂಗ ಮಾಡಕತ್ಯಾನ ನಿಮ್ಮಪ್ಪ. ಮೊದಲ ಕಾಲ್ ಕಾಲಕ್ಕ ಮಳಿ ಬರವಲ್ದು ಅಂತ ಬಡಕೊಳ್ತಾರ ಜನ, ನಿಮ್ಮಪ್ಪನಿಗೆ ಯಾವಾಗ ಬರುತ್ತೊ ಬುದ್ದಿ. ತಕ ಅಲ್ಲೆ ಬುತ್ತಿ ಕೊಟ್ಟು ಹಂಗ ಸಾಲಿಗೆ ಹೊಗು ತಿಳಿತಾ, ಹೂಂ.... ನಾ.....ಬೇ, ನಾ ಸಿದ್ದುನ್ನು ಕರಕೊಂಡು ಹೊಗ್ತೀನಿ ಅಂದ ರಾಮು. ಚಡ್ಡಿ ಏರಿಸಿಕೊಂಡವನೆ ಎಡಗೈಯಲ್ಲಿ ಇದ್ದ ಬಿಳಿ ತೊಪ್ಪಿಗೆಯಲ್ಲಿ ಮೂಗು ಒಮ್ಮೆ ವರಸಿಕೊಂಡು ಚಂಗ್ ಅಂತ ಬಾಗಿಲ ಒಳಗಿಂದಾನೆ ಹಾರಿದವನು, ಸೀದ ಸಿದ್ದಾ ಸಿದ್ದಾ ಬಾರಲೆ ಬೇಗ, ಸಾಲಿಗೆ ಟೈಮ್ ಅಕಾತಿ, ಸಿದ್ದನ್ನ ಕೂಗಿದ. ಬಂದಲೆ, ಇಕ ರವಿ ಉಂಡಿ ನಮ್ಮವ್ವ ಕೊಟ್ಟಿದ್ದಲು ನಿಂಗಂತ ಇಟ್ಟುಕೊಂಡಿದ್ದೆ ಅನ್ನುತ್ತ ಸಿದ್ದ ತನ್ನ ಹರಕ ಚಡ್ಡಿಯ ಬಕ್ಕಣಕ್ಕ ಕೈ ಹಾಕಿ ಒಂದು ಉಂಡಿ ಹೊರಗ ತೆಗದವನೆ ರಾಮು ಕೈಗೆ ಕೊಟ್ಟು, ನಡಿ ಹೊಗೋಣ ಅಂತ ಹೊರಟ ಇಬ್ಬರನ್ನು ಸಾಂತಮ್ಮಜ್ಜಿ ಏನ್ರಪ್ಪ ರಾಮ–ಲಕ್ಮಣ ಯಾವಕಡೆ ಸವಾರಿ ಅಂದುದ್ದಕ್ಕೆ, ಸಾಲಿಗಬೆ ಮುದುಕಿ ನಿನಗೇನು ಅರಾಮ ಕುಂತೀಯ ಅಂದ ಸಿದ್ದ, ಹೌದಪ್ಪ ನಮ್ಮ ಕಾಲದಾಗ ಸಾಲಿಪಾಲಿ ನೋಡಿಲ್ಲ ಬುಡು, ಇದ್ದರು ನಮ್ಮನ್ನಾರು ಕಲಿಸಬೇಕು ಅಂತ ನಿಟ್ಟುಸಿರು ಬಿಡತಾ, ಇದ್ದರ ಹಿಂಗ ಇರಬೇಕು ಮಕ್ಕಳು ಒಂದ ತಾಯಿ ಮಕ್ಕಳು ಅಲ್ದಿದ್ದರು ಎಷ್ಟು ಹಚ್ಚಿಕೊಂಡಾರ, ಇವನ ಬಿಟ್ಟರ ಅವ ಇರಲ್ಲ ಅವನ ಬಿಟ್ಟು ಇವ ಹೊಗೊದಿಲ್ಲ ಅಂದಕೊಳ್ತಾ ನಶೆ ಡಬ್ಬಿಗೆ ಕೈಹಾಕಿದಲು.

ಅಷ್ಟೇನು ಬುದ್ದಿವಂತರಲ್ಲದ ರಾಮು ಮತ್ತ ಸಿದ್ದ ಏಳನೆ ತರಗತಿವರಿಗೆ ಹರಸಹಾಸ ಮಾಡಿ ಬಂದರು ಸರ್ವಜ್ನ ಹೇಳಿದಂಗ "ಒಕ್ಕಲಿಗನಿಗೆ ಓದಲ್ಲ, ಬೆಕ್ಕು ಹೆಬ್ಬುಲಿಯಲ್ಲ, ಎಕ್ಕೆ ಗಿಡವು ವನವಲ್ಲ ಇವು ಮೂರು ಲೆಕ್ಕದೊಳಗಿಲ್ಲ ಸರ್ವಜ್ನ" ಅನ್ನೂ ಮಾತಿನಂತೆ ಏಳರಲ್ಲಿ ಡುಮ್ಕಿ ಹೊಡದು ಮನೆಯಲ್ಲಿದ್ದ ನಾಲ್ಕು ಎಮ್ಮೆ ಕಾಯೊ ಕೆಲಸ ಸಿದ್ದನ ಪಾಲಿಗೆ ಬಂದರ, ಅವರಪ್ಪನ ಜೊತೆಗೆ ರಾಟಿ(ಹೊಲಿಗೆ ಯಂತ್ರ) ತುಳಿಯೊ ಕೆಲಸ ಲಕ್ಮಣನಿಗೆ ಪಕ್ಕ ಆಯ್ತು. ಕಾಲಾಂತರದಲ್ಲಿ ಸಿದ್ದಲಿಂಗಪ್ಪ ಅಚಾನಕ್ ಆಗಿ ಸತ್ತೊದರ ಇತ್ತಾ ಚಿಂಪಿಗರ ಬಸಣ್ಣ ಲಕ್ಮಣ್ನ ಅನಾಥನನ್ನಾಗಿ ಮಾಡಿ ಬದುಕಿನ ನೊಗನಾ ಬಸಣ್ಣೆವ್ವನ ಹೆಗಲಿಗೇರಿ ತೀರಿಕೊಂಡ. ಕಾಲಕ್ರಮೇಣ ದ್ವಡ್ಡವರಾದ ಸಿದ್ದ ಸಂಪಗೀನ, ಲಕ್ಮಣ ಮಲ್ಲಿನಾ ಮದುವೆಯಾಗಿ ಸುಖ ಸಂಸಾರ ಮಾಡತಿದ್ದರು. ಮನೆ ಬ್ಯಾರೆ ಆದರು ಅಣ್ಣ ತಮ್ಮಂದರಂತೆ ಸಿದ್ದ, ಲಕ್ಮಣ ಇದ್ದರ, ಸ್ವಂತ ಒಡಹುಟ್ಟಿದವರಂತೆ ಸಂಪಗಿ, ಮಲ್ಲವ್ವ ಹೊಂದಿಕೊಂಡಿದ್ದರು, ಇವರನ್ನ ನೋಡಿದರ ಸ್ವತಃ ರಾಮ–ಲಕ್ಮಣರನ್ನು ನಿವಾಳಿಸಿ ಬಿಸಾಡಬಹುದಿತ್ತು. ಅದ್ಯಾರು ಹೇಳಿದರೊ ಕಾಣೆ "ಎರಡು ಮೀಸೆ ಒಂದಾಗಬಹುದು, ಆದರ ಎರಡು ಜಡೆ ಮಾತ್ರ ಒಟ್ಟಿಗಿರಲಿಕ್ಕೆ ಸಾದ್ಯವಿಲ್ಲ" ಅಂತ, ಅವರನ್ನ ಕರಕೊಂಡು ಬಂದು ಇವರ ಮುಂದ ನಿಲಸಬೇಕು ನೋಡು ಅಂತ ಮಾತಾಡತಿದ್ದ ಜನ, ಅಂದು ಗರ ಬಡಿದಾರಂಗ ಸೆರಗ ಮುಚ್ಚಿಕೊಂಡು ಮುಚ್ಚಿದ ಬಾಗಿಲ ಸಂದಿಯಿಂದ, ಕಿಟಕಿ ಕಿಂಡಿಯಲ್ಲಿ ಉಗುಳು ನುಂಗಲಿಕ್ಕೂ ಹೆದರಿಕೊಂಡು ಮುಂದೇನು ಅಂತ ಕುಂತಿದ್ದರು, ಇಡಿ ಊರಿಗೆ ಊರೆ ಸ್ತಬ್ಧ, ಮಟ ಮಟ ಮದ್ಯಾಣ ದೂಳೆಬ್ಬುಸುತ ಬಂದ ಜೀಪು ಸಿದ್ದನ ಮನೆ ಮುಂದೆ ನಿಂತು, ತಕ್ಷಣ ಕೆಳಗಿಳಿದ ಇಬ್ಬರು ಪೋಲಿಸರು ಸಿದ್ದನ ಮನೆಯೊಳಗ ಹೋದವರೆ ಸಿದ್ದನ ಕೈಗೆ ಕೊಳ ತೊಡಿಸಿ ಜೀಪ ಹತ್ತಲೆ ಬೇಕೋಪ ಅಂತ ಕೊಳಪಟ್ಟಿ ಹಿಡಕಂಡು ಹೊರಗ ಬಂದರ! ಸಂಪಗೀ ಸಾಹೇಬರ ಬುಟ್ಟು ಬಿಡರಿ ನಿಮ್ಮ ಕಾಲ ಹಿಡಕಂತೀನಿ ಅಂತ ಗೋಳಾಡಿತಿದ್ದರ ಎಪ್ಪಾ... ಎಪ್ಪಾ... ಅಂತ ನೀಲಿ, ತಿಪ್ಪೇಸಿ ಅವರವ್ವನ ಸೆರಗು ಹಿಡಕೊಂಡು ಅಳುತಿದ್ವು.

ನಮ್ಮೂರ ಪ್ರಗತಿ ಗ್ರಾಮೀಣ ಬ್ಯಾಂಕನಾಗ ನಲವತ್ತ ಸಾವಿರ ಲೋನ್ ಕೊಟ್ಟಾರ ಅದಕ್ಕ ಈ ನಾಲ್ಕ ಎಮ್ಮಿ ಜತಿಗೆ ಎರಡು ಜರ್ಸಿ ಆಕಳ ತರೊದು ಅಂತ ಡಿಸೈಡ್ ಮಾಡಿನಿ, ಅವು ನಮ್ಮ ಮನಿ ಆಕಳದಂಗ ಅಲ್ಲ, ಅವುಕ್ಕ ದಿನಾ ಮೈ ತೊಳಿಬೇಕು, ಕಾಲಾಗ ಸಗಣಿ ಒಂಚೋರು ಇರಂಗಲ್ಲ ನೋಡು, ಅಂತ ಲಕ್ಮಣನಿಗೆ ಹೇಳತ ಕಣದ ಕಡಿಗೆ ಜಲ್ದಿ ಜಲ್ದಿ ಹೊಂಟಿದ್ದ ಸಿದ್ದನ್ನ ತಡದ ಸಾಹುಕಾರ ಮುನಿಯಪ್ಪ ಏನಲೆ ಸಿದ್ದ ಎರಡು ತಿಂಗಳ ಆತು ಇತ್ಲಾಗ ಬಡ್ಡಿನು ಇಲ್ಲ, ಅತ್ಲಾಗ ಅಸ್ಲುನು ಕೊಟ್ಟಿಲ್ಲ ಏನ್ ನಿನ್ನ ಹಕೀಕತ್ತು, ರೊಕ್ಕಾ ಕೊಡಬೇಕಂತ ಮಾಡಿ ಇಲ್ಲ ಗಂಟ–ಗಿಂಟ ಹಾಕೊ ಲೆಕ್ಕಾಚಾರದಾಗ ಅದಿಯೇನು? ಆಂದಿದ್ದಕ್ಕ, ಏ ಮುನಿಯಣ್ಣ ತಡಿ ಮಾರಾಯ ಇನ್ನ ನಾಕ ತಿಂಗಳು ಜರ್ಸಿ ಆಕಳ ತರಾಕ ಹೊಂಟೀನಿ ಬ್ಯಾಂಕಿಂದ ಲೋನ್ ಆಗೈತಿ, ಅದ ಗಡಿಬಿಡಿಯಲ್ಲಿ ಕಣದ ಕಡಿಗೆ ಹೊಂಟಿದ್ದೆ, ಆಕಳ ಕಟ್ಟಾಕ ಒಂದಿಷ್ಟು ಇಂಬ ಮಾಡಾಣ ಅಂತ, ಸ್ವಲ್ಪ ದಿನ ತಡಕ ಅಸಲು ಬಡ್ಡಿ ಒಟ್ಟಿಗೆ ಕೊಡತೀನಿ. ಅದೇನು ಕೊಡತೀಯೋ ನಿಮ್ಮಪ್ಪ ಹಿಂಗ ಅಂದ್ ನಿಗಿರಿಕೊಂಡ, ನಾಕ ಅಂದರ ನಾಕ ತಿಂಗಳ, ಇಲ್ಲ ಅಂದರ ಗೊತ್ತಲ್ಲ ಮನಿ ಕಾಲಿ ಮಾಡಬೇಕು ಅಷ್ಟೆ ಅಂದದ್ದನ್ನ ಕೇಳಿದ ಸಿದ್ದನಿಗೆ ತನ್ನೆಲ್ಲ ಸಮಸ್ಯೆಗೆ ಪರಿಹಾರ ಜರ್ಸಿ ಆಕಳದ ರೂಪದಲ್ಲಿ ಕಂಡಂತೆ ಆಯ್ತು. ಎಂಗಿದ್ದರು ಕಣ ದ್ವಡ್ಡದು ಐತಿ ಇಲ್ಲೆ ಆಕಳ ಕಟ್ಟಲಿಕ್ಕೆ ಒಂದು ಸಣ್ಣ ತಗಡಿನ ಮನಿ ಮಾಡಿದರಾಯ್ತು ಅಂತ ಅಲ್ಲೆ ಇದ್ದ ಹಾರಿಕೊಲಿನಿಂದ ಕುಣಿ ತಗಿಯಲಿಕ್ಕೆ ನಿಂತ, ಇದು ನಾ ಕೇಳು ನೀ ಕೇಳು ಅಂತ ಮಲ್ಲವ್ವನ ಕಿವಿಗೂ ಬಿತ್ತು, ಅದೇನು ಕೇಡಗಾಲನೊ ಏನೊ ಮಲ್ಲವ್ವನ ಮೈ ಉರಿದು ಹೊಯ್ತು, ಮಟ ಮಟ ಬಿಸಿಲಿನಾಗ ಲಕ್ಮಣ ಊಟಕ್ಕ ಅಂತ ಬಂದವನಿಗೆ, ಊಟಕ್ಕ ಇಟ್ಟ ಮಲ್ಲವ್ವ ಬೇಕಂತಲೆ ಅಡಿಗಿ ಮನ್ಯಾಗ ದಬ್ಬ–ದುಬ್ಬು ಅಂತ ಗಂಗಾಳ ಚರಿಗಿ ಎಸದಾಡಿಕತ್ತಿದ್ದನ್ನ ಗಮನಿಸಿದ ಲಕ್ಮಣ್ಣ ಏನಾತು ಅಂತರ ಹೇಳು... ಇಲ್ಲ ಸುಮ್ಮನರ ಇರು... ಅಂದ, ಸ್ವಲ್ಪ ಹೊತ್ತು ಸುಮ್ಮನಿದ್ದ ಮಲ್ಲವ್ವ ಇನ್ನೇನು ಆಗಬೇಕು? ಅಲ್ಲ ಆ ಜಾಗ ತಗೊಳ್ವಾಗ ಸಿದ್ದಲಿಂಗಪ್ಪನಿಗೆ ನಿಮ್ಮಪ್ಪ ಅಂದರ ನಮ್ಮ ಮಾವ ಅರ್ದ ರೊಕ್ಕ ಕೊಟ್ಟಿಲ್ಲೇನು? ನಮಗು ಅದರಾಗ(ಕಣದಾಗ) ಅರ್ದ ಜಾಗ ಬರಬೇಕು, ಅಲ್ಲ ನಾವು ಹೆಂಗಸರು ಬುಡಿ, ನಿಮ್ಮನ್ನಾದರು ಒಂದು ಮಾತು ಕೇಳಬಾರದ, ನೀವಂತು ಏನು ಮಾಡಲಿಲ್ಲ ಕೊನೆ ಪಕ್ಷ ನಮ್ಮ ಮಾವ ಮಾಡಿದ್ದಾದರು ನನ್ನ ಮಗನಿಗೆ ಬ್ಯಾಡ... ಅಂತ ಹಣೆಯನ್ನ ರಪ್ಪ ರಪ್ಪ ಅಂತ ಬಡಿದುಕೊಂಡು ಅಳಾಕತ್ತಿದ್ಲು ಮಲ್ಲವ್ವ, ಎಲ್ಲಿಂದ ಬಂತೊ ಸಿಟ್ಟು ಉಣ್ಣ ತಟ್ಟಿನ ಹೊಗದು ಸೀದ ಎದ್ದವನ ಅತಿಯಾಯ್ತು ಅವನದು ಆ ಮಗನ್ನ ಒಂದು ಕೈ ನೋಡೆ ಬಿಡತೀನಿ, ಲುಂಗೀನ ಅಡರ ಕಟ್ಟಿಕೊಂಡ ಬರ ಬರ ಅಂತ ಹೊಂಟ, ಇತ್ತ ಮಲ್ಲವ್ವನ ಮುಖ ಕುಂಬಳಕಾಯಿಯಂತಾಯಿತು ಮನಸಲ್ಲೆ ಏನೊ ಸಾದಿಸಿದ ತೃಪ್ತಿ.

ಯಾಕಲೆ ಸಿದ್ದ ನಿಂದು ಅತಿ ಆಯಿತು ಬಿಡು, ಅಲೆ ಇವನ..... ಏನಂತರ ಹೇಳೊ. ಯಾರನ್ನ ಕೇಳಿ ಇಲ್ಲಿ ಗುಂಡಿ ತೆಗಿತಿದ್ದಿ? ಯಾರನ್ನ ಯಾಕ ಕೇಳಬೇಕೊ ನಮ್ಮ ಕಣ, ನನಗು ನಿನಗೂ ಮಾತ್ರ ಸಂಬಂಧ ಪಟ್ಟಿದ್ದು, ಯಾರನ್ನ ಯಾಕ ಕೇಳಬೇಕು?. ಅದ ನನಗು ಸಂಬಂಧ ಇದ್ದ ಮೇಲೆ ನನ್ನ ಒಂದು ಮಾತು ಕೇಳಬೇಕಲ್ಲ, ಹೊಗಲೆ ನಿನ್ನೇನು ಕೇಳೊದು ದರ್ಬೇಶೀನ(ಬಟ್ಟೆ ಹೊಲಿಯುವವನು) ಥೂ ಥೂ ...... ಸಿದ್ದ ಮಾತು ಬಿಗಿ ಇರಲಿ ಹಲ್ಲು ಮುರಿತೀನಿ ಮಗನ, ಹೊಗಲೆ ಏನಾದರು ಮಾಡಿಕೊ ಅಂತ ಸಿದ್ದ ತನ್ನಪಾಡಿಗೆ ಗುಂಡಿ ಮುಂದೆ ಮುಂದೆ ತಗಿತಿದ್ದ. ಇತ್ತ ಲಕ್ಮಣನ ಸಿಟ್ಟು ನೆತ್ತಿಗೇರಿತ್ತು, ನಾ ಇಷ್ಟು ಹೇಳಿದರು ಕಿಮ್ಮತ್ತಿನ ಬೆಲಿ ಕೊಡವಲ್ಲ ಅಂದಕೊಂಡವನೆ ಸಿದ್ದ ನನ್ನ ಪಾಲಿನ ಜಾಗ ಬಿಟ್ಟು ನೀ ಏನಾದರು ಮಾಡಿಕೊ ಈಗ ಇಲ್ಲಿಗೆ ಕೆಲಸ ನಿಲ್ಲಿಸು, ಆಳೆತೆ ಮಾಡಿ "ಬೇಲಿ" ಹಾಕಿಸು ಅಂತ ಹೇಳಿದ. ಬೇಲಿ ನಮ್ಮಬ್ಬಿರ ಮದ್ಯೆ ಬೇಲಿ ಥೂ ಥೂ ಥೂ........ ತನ್ನಪಾಡಿಗೆ ಸಿದ್ದ ತನ್ನ ಕೆಲಸ ಮುಂದುವರಿಸಿದ, ಸಿಟ್ಟಿನ ಕೈಗೆ ಬುದ್ದಿ ಕೊಟ್ಟ ಲಕ್ಮಣ ಅಲ್ಲೆ ಬಿದ್ದಿದ್ದ ಸಲಿಕಿ ತಗೊಂಡು ಹಿಂದು ಮುಂದು ನೋಡದೆ ಸಿದ್ದನ ತಲೆಗೆ ಹೊಡೆದ ಬಿಟ್ಟ, ಯಪ್ಪಾ ಸತ್ತೆನೋ.............. ಸಿದ್ದ ಒಂದೆ ಹೊಡೆತಕ್ಕೆ ನೆಲಕ್ಕ ಬಿದ್ದ, ನಾ ಕೂಡು ನೀ ಕೂಡು ಅಂದುಕೊಂಡು ಸುದ್ದಿ ಸಾಹುಕಾರ ಮುನಿಯಪ್ಪನಿಗು ಮುಟ್ಟಿತು, ಪದ್ದತಿತಂತೆ ಪೋಲಿಸ್ ಸ್ಟೆಷನ್ ಗೆ ಫೋನ್ ಮಾಡಿದ ಮುನಿಯಪ್ಪ.

ನ್ಯಾಯಲಯದಲ್ಲಿ ತಾನೆ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಕ್ಕೆ ಹದಿನಾಲ್ಕು ವರ್ಷ ಸೆರೆವಾಸ ವಿದಿಸಲಾಗುತ್ತದೆ, ಸಿಟ್ಟಿನ ಕೈಗೆ ಒಂದು ಕ್ಷಣ ಬುದ್ದಿ ಕೊಟ್ಟ ಅವನ ಮತಿಯನ್ನ ನೆನದು ಪ್ರತಿನಿತ್ಯ ಅವನನ್ನ ಅವನ ಆತ್ಮ ಸಾಕ್ಷಿ ಇಂಚಿಂಚಾಗಿ ಕೊಂದಿತ್ತು, ಪಾಪಪ್ರಜ್ನೆ ಅವನನ್ನ ಪಾತಾಳಕ್ಕೆ ತುಳಿದುಹಾಕಿತ್ತು ಅನ್ನ, ಹಸಿವುಗಳು ಮರೆಯಾಗಿ ಹೊಗಿದ್ದ ಲಕ್ಮಣ ಜೀವಂತ ಶವವಾಗಿದ್ದ, ಅವನ ಉಸಿರಾಟಕ್ಕೆ ಕಾರಣ ಒಂದೆ ಆಗಿತ್ತು ಅದೆ ಅವನ ಮಡದಿ ಮತ್ತು ಅವನ ಮುದ್ದಿನ ಮಕ್ಕಳಾದ ನೀಲಿ,ತಿಪ್ಪೇಸಿಯನ್ನ ನೋಡಬೇಕು ಅಂತ. ಹದಿನಾಲ್ಕು ವರ್ಷ ಸೆರೆವಾಸ ಅನುಭವಿಸಿದ ಮೈ, ಮನಸ್ಸುಗಳು ತಮ್ಮ ಸ್ವಾದವನ್ನ ಕಳೆದುಕೊಂಡಿದ್ದವು ಆದರೂ ಬಿಡುಗಡೆಯ ದಿನದ ನಿರೀಕ್ಷೆಯಲ್ಲಿದ್ದ ಲಕ್ಮಣ್ಣ ಆ ದಿನ ತನ್ನನ್ನು ಕರೆದ್ವೆಯಲು ಹೆಂಡತಿ ಮಕ್ಕಳು ಬಂದಿರುವ ನಂಬಿಕೆ ಹುಸಿಯಾಗಿತ್ತು, ತಾನೆ ಸಾವರಿಸಿಕೊಂಡು ಮನೆಯತ್ತ ಹೆಜ್ಜೆ ಹಾಕಿದ ಅವನನ್ನು ದಾರಿಯುದ್ದಕ್ಕು ಯಾವ ನಾಯಿಯು ಮೂಸಲಿಲ್ಲ ಸೀದ ಮನೆಯ ಮುಂದೆ ಬಂದವನಿಗೆ ಆಘಾತವಾಗಿತ್ತು ಮಲ್ಲಿಯೋಂದಿಗೆ ಸಂತೋಷವಾಗಿ ಲಲ್ಲೆಹೊಡೆಯುತ್ತಾ ಕುಳಿತಿದ್ದ ಮುನಿಯಪ್ಪನನ್ನು ಕಂಡಾಗಲೆ ಅಂಗೈಯಷ್ಟೆ ಸ್ಪಷ್ಟವಾಗಿತ್ತು ಸತ್ಯ. ಮಲ್ಲಿಯಾದರು ಏನು ಮಾಡತಾಳ ಅವಳ ಬೆನ್ನಿಗೆ ಯಾರ ಇದ್ದಿದ್ದಿಲ್ಲ ಅವಳು ಯಾರ ಬೆನ್ನಿಗೆ ಬಿದ್ದಿದ್ದಿಲ್ಲ ಅದಕ ಹೇಳೊದು "ಅಣ್ಣ ತಮ್ಮರಿರಬೇಕು ಬೆನ್ನಿಗೆ ಕಷ್ಟ ಸುಖದಲ್ಲಿ ಹೆಣ್ಣಿಗೆ" ಒಂದು ಕಡೆ ಮೈನೆರತ ನೀಲಿಯನ್ನ ಬೀದಿನಾಯಿಗಳಿಂದ ಕಾಪಾಡಿಕೊಳ್ಳೊ ಕಷ್ಟ, ಮತ್ತೊಂದು ಕಡೆ ಪಟ್ಟಣದಾಗ ಓದುತಿದ್ದ ತಿಪ್ಪೇಶಿಗೆ ಹಣದ ಅವಷ್ಯಕತೆ ಇದೆಲ್ಲದರ ಮಧ್ಯೆ ಹೊಟ್ಟೆ ಹೊರೆಯೋ ಕೆಲಸ ಬೇರೆ, ಸಾಲದಕ್ಕ ಪ್ರತಿ ದಿನ ಮಾವ ಮಾಡಿದ ಸಾಲಕ್ಕ ಮುನಿಯಪ್ಪನ ಕಾಟ, ಇದೆನ್ನಲ್ಲ ನೋಡಿ ನೋಡಿ ಇವನ ಕಾಟ ತಾಳಲಾರದೆ ಕೆರೆನೋ, ಬಾವಿನೊ ನೋಡಿಕೊಳ್ಳುಬೇಕು ಅಂದಕೊಂಡಗಲೆಲ್ಲಾ ನೀಲಿ ಚಿತ್ರ ಕಣ್ಣ ಮುಂದೆ ಬಂದು ನಿಲ್ಲುತಿತ್ತು, ನಾನಿರುವಾಗಲೆ ಹೀಗೆ ಇನ್ನು ನಾನು ಸತ್ತು ಈ ಹುಡುಗರನ್ನ ಆನಾಥ ಮಾಡಿದರೆ ಜನ ಕಾಗೆ ಹದ್ದುಗಳಂತೆ ಇವರನ್ನ ಹರಿದು ಮುಕ್ಕಿಬಿಡತಾರೆ, ಮೇಲಾಗಿ ಕೊಲೆಗಾರನ ಹೆಂಡತಿ ಕೊಲೆಗಾರನ ಹೆಂಡತಿ ಎಂದು ಇಂಚಿಂಚಿ ಕೊಲ್ಲುವ ಜನರಿಂದ ಬದಕು ಬಯಸುವುದಾದರು ಹೇಗೆ? "ಆವಾಗಲೆ ಮಲ್ಲವ್ವ ಒಂದು ಗಟ್ಟಿ ನಿರ್ಧಾರ ಮಾಡಿದ್ದಲು ಕಷ್ಟಕ್ಕ ಆಗದ ಜನ ಏನೆಂದರೇನು, ಮಣ್ಣಿಗೆ ಹೋಗೊ ಮೈಗೆ ಮೈಲಿಗೆಯಂತದ್ದು? ಮನಸ್ಸಿಗಿಲ್ಲದ ಶೀಲ ಮೈಗೆ ಯಾಕ? ಆಡಿಕೊಳ್ಳುವವರು ಆಡಿಕೊಳ್ಳಲಿ, ನನ್ನ ಕುಟುಂಬ ಬೀದಿಗೆ ಬಿದ್ದರೂ ಅದನ್ನೆ ಮಾಡೊ ಜನಕ್ಕ ಹೆದರಿ ಸಾಯಾಕಿ ಅಲ್ಲ ನಾನು, ತನ್ನ ಜೀವನದಲ್ಲಿ ಬಂದ ಬಿರುಗಾಳಿಯ ಹೊಡೆತದಿಂದ ತನ್ನ ಮಗ, ಮಗಳು, ಕುಟುಂಭದ ರಕ್ಷಣೆಗಾಗಿ ಮುನಿಯಪ್ಪನ ಬೇಕುಗಳಿಗೆ ವಲ್ಲದ ಮನಸ್ಸಿನಿಂದಲೆ ಒಗ್ಗಿಕೊಂಡಿದ್ದಳು.

ಇದನ್ನೆಲ್ಲ ನೋಡಿದ ಲಕ್ಮಣ ಅಲ್ಲೆ ಕುಸಿದು ಬಿದ್ದ, ಸಾವರಿಸಿಕೊಂಡು ಮೇಲೆ ಎದ್ದವನೆ ಮಗನೆಲ್ಲಿ? ಎಂದಿದ್ದಕ್ಕೆ , ಅವನು ಪಟ್ಟಣದಲ್ಲಿ ಓದುತಿದ್ದಾನೆ, ಅಲ್ಲಿಗೆ ನೀನು ಹೋಗಬೇಡ, ನಿನ್ನನ್ನು ಕಂಡರೆ ಉರಿದುಬೀಳುತ್ತಾನೆ ಎಂದು ಒಳಗೆ ಹೊದಳು, ಮಗಳು ಕಾಣಲಿಲ್ಲ ಲಕ್ಮಣನಿಗೆ, ಕಿರು ನಗೆಯೊಂದಿಗೆ ಬುಜದ ಮೇಲಿನ ವಸ್ತ್ರ ಸರಿಮಾಡಿಕೊಳ್ಳುತ್ತ ಹೊರ ನೆಡೆದ ಮುನಿಯಪ್ಪನನ್ನ ಕಂಡ ಲಕ್ಮಣನ ಕೈ ಬಿಗಿಯಾಗಿ ಅವನನ್ನು ಕೊಂದು ಬಿಡುವಷ್ಟು ಕೋಪ ಬಂದಿತಾದರು ಜೈಲು ವಾಸ ಅವನನ್ನ ಸುಮ್ಮನಿರುವಂತೆ ಮಾಡಿತ್ತು, ಎಲ್ಲವೂ ತನ್ನ ಕೈ ಮೀರಿ ಹೊಗಿದ್ದು ಕಣ್ಣಿಗೆ ರಾಚುವಂತೆ ಗೊಚರಿಸುತಿತ್ತು, ತನ್ನ ತಪ್ಪಿನ ಅರಿವಾಗಿ ನೇರ ಊರ ಆಚೆಗಿನ ತನ್ನ ಕಣದ ಕಡೆಗೆ ತನಗರಿವಿಲ್ಲದಂತೆ ನೆಡೆಯುತಿದ್ದ ಲಕ್ಮಣ ದಾರಿಯಲ್ಲಿನ ಕಲ್ಲಿಗೆ ಕಾಲು ತಾಗಿ ಎಡವಿ ಬಿದ್ದಿದ್ದನ್ನ ಕಂಡ ಸಾಲಿಯ ಹುಡುಗರು ಓಡಿ ಬಂದು ಲಕ್ಮಣನನ್ನ ಎದ್ದು ನಿಲ್ಲಿಸಿದರು, ಹುಡುಗರ ಸಹಾಯದಿಂದ ಸಾಲಿಯ ಹಿಂದೆ ಇದ್ದ ತನ್ನ ಕಣಕ್ಕೆ ಹೊಗಿ ಅಲ್ಲೆ ಬೆಳೆದಿದ್ದ ಕರಿಜಾಲಿಯ ಮರದ ಬುಡದಲ್ಲಿ ಕುಳಿತ.

ತಕ್ಷಣ ಪುಟ್ಟ ಮಗುವೊಂದು ಸಣ್ಣದಾಗಿ ಹಾಳಾಗಿದ್ದ ಬೇಲಿಯನ್ನ ದಾಟಿ ಬಂದು ಅಜ್ಜ ನೀರು ಬೇಕ... ಅಂತ ತನ್ನ ಪುಟ್ಟ ಪಾಟಿ ಚೀಲದಿಂದ ನೀರಿನ ಬಾಟಲಿಯನ್ನ ಕೊಟ್ಟಳು, ನೀರು ಕುಡಿದ ಲಕ್ಮಣ ಯಾರ ಮಗಳಮ್ಮ ನೀನು ಯಾರ ಮನೆ ಅಂದಿದ್ದಕ್ಕೆ, ಅಜ್ಜ ನನ್ನ ಹೆಸರು ಸೀತೆ ನಾನು ಸುರೇಶಪ್ಪನ ಮಗಳು, ಸಿದ್ದಪ್ಪಣ್ಣನ ಮೊಮ್ಮಗಳು, ಸಿದ್ದಲಿಂಗಪ್ಪಜ್ಜನ ಮರಿಮೊಮ್ಮಗಳು, ಒಂದನೆ ಕ್ಲಾಸು ಅಂದವಳೆ ನೀರಿನ ಬಾಟಲಿಯನ್ನ ತೆಗಿದುಕೊಂಡು ಸಾಲಿಯಕಡಿಗೆ ಹೋಡಿ ಹೊದಳು. ಬೇಲಿಯ ನೆಪದಲ್ಲಿ ಸ್ನೇಹಿತನ ಪ್ರಾಣ ತೆಗದ ನಾನು, ನನ್ನ ಮನೆ, ಮಡದಿ, ಮಕ್ಕಳನ್ನ ಕಳೆದುಕೊಂಡೆ ಅಂತಹ ನನಗೆ ಯಾವ ಸಿದ್ದನನ್ನು ಕೊಂದ ನನ್ನ ಈ ಬಾಯಿಗೆ ಅವನ ಕರುಳು ಕುಡಿಯಿಂದಲೆ ಇಂದು ನೀರು! ಮುಗ್ಧ ಮನಸ್ಸಿಗೆಲ್ಲಿಯ ಬೇಲಿ! ಅದೇನಿದ್ದರು ನಮ್ಮಂತ ಮೂಡರಿಗೆ ಮಾತ್ರ, ನಿಟ್ಟುಸಿರ ಬಿಟ್ಟ ಲಕ್ಮಣನ ಪ್ರಾಣ ಪಕ್ಷಿ ಹಾಗೆ ಹಾರಿಹೋಗಿತ್ತು, ಮೊಮ್ಮಗಳ ರೂಪದಲ್ಲಿ ಸಿದ್ದ ತನ್ನ ಪ್ರೀತಿಯ ಸ್ನೇಯಿತನಿಗೆ ಕೊನೆಯದಾಗಿ ನೀರುಣಿಸಿದನು, ಅವರ ಸ್ನೇಹಕ್ಕೆ ಮೂತ್ತೊಮ್ಮೆ ನೀರೆರೆದನು! ಸಾವು ಸೋತಿತು, ಸ್ನೇಹ ಗೆದ್ದಿತು, ಕೊನೆಗೂ ಬೇಲಿಯ ಬಲಿಯಾಯ್ತು!!!.

## ವಿಜ್ಞಾನ

## ಎಲ್ಲಾ ಮೋಡಗಳು ಏಕೆ ಮಳೆ ಸುರಿಸುವುದಿಲ್ಲ?

■ **ಆರ್.ಬಿ.ಗುರುಬಸವರಾಜ**

ಸಂಜೆ ವೇಳೆ ಸಿಂದು, ಬಿಂದು, ರಷ್ಮಿ, ಮೇರಿ, ನಾಜಿಮಾ ಎಲ್ಲರೂ ಮನೆಯ ಬಳಿ ಆಟವಾಡುತ್ತಿದ್ದರು. ಇದ್ದಕ್ಕಿದ್ದಂತೆ ಆಗಸದಲ್ಲಿ ಮೋಡಗಳು ದಟ್ಟೈಸಿದವು. ಇದನ್ನು ಗಮನಿಸಿದ ಬಿಂದು 'ಮಳೆ ಬರುವ ಹಾಗಿದೆ. ನಾನು ಮನೆಗೆ ಹೋಗ್ತೀನಿ' ಎಂದಳು. 'ಮಳೆ ಬರಲ್ಲ, ಇನ್ನೂ ಸ್ವಲ್ಪ ಹೊತ್ತು ಆಡೋಣ ಬಾ' ಎಂದಳು ಮೇರಿ. 'ನೋಡಲ್ಲಿ ಆಕಾಶದಲ್ಲಿ ಮೋಡಗಳು ದಟ್ಟೈಸಿವೆ. ಗ್ಯಾರಂಟಿ ಮಳೆ ಬರುತ್ತೆ. ಮಳೇಲಿ ತೋಯ್ಸಿಕೊಂಡ್ರೆ ನಮ್ಮಮ್ಮ ಬೈತಾರೆ' ಎಂದು ಮನೆ ಕಡೆ ಹೊರಟಳು. 'ಲೇಯ್ ನಿಲ್ಲು, ನಾನೂ ಬರ್ತೀನಿ' ಎಂದು ಅವಳ ಹಿಂದೆಯೇ ಓಡಿದಳು ಸಿಂದು. ಮನೆ ತಲುಪಿದ ಮೇಲೆ ಬಿಂದು ತಂದೆಗೆ "ಪಪ್ಪಾ, ಆಕಾಶದಲ್ಲಿ ಮೋಡಗಳಿವೆಯಲ್ಲ, ಈಗ ಮಳೆ ಬರುತ್ತಾ?" ಪ್ರಶ್ನೆ ಕೇಳಿದಳು. ತಂದೆ ಇಲ್ಲ ಎಂದರು. "ಮೋಡಗಳಿದ್ರೂ ಸಹ ಮಳೆ ಯಾಕೆ ಬರಲ್ಲ" ಎಂದಳು ಸಿಂದು. ಎಲ್ಲಾ ಮೋಡಗಳು ಮಳೆ ಸುರಿಸುವುದಿಲ್ಲ. ಮಳೆ ಸುರಿಯಬೇಕಾದರೆ ಕೆಲವು ಅಂಶಗಳತ್ತ ಗಮನಹರಿಸಬೇಕು ಎಂದು ಹೇಳುತ್ತಾ ಅವರ ಅನುಮಾನವನ್ನು ತಂದೆ ಬಗೆ ಹರಿಸಿದರು.



ಎಲ್ಲಾ ಮೋಡಗಳು ಮಳೆಯನ್ನು ಉಂಟುಮಾಡುವುದಿಲ್ಲ. ಏಕೆಂದರೆ ಮಳೆಯ ರಚನೆಯು ಗಾಳಿಯಲ್ಲಿನ ನೀರಿನ ಆವಿಯ ಪ್ರಮಾಣ, ವಾತಾವರಣದಲ್ಲಿನ ತಾಪಮಾನ, ಒತ್ತಡ ಮತ್ತು ಸಣ್ಣಹನಿಗಳ ರಚನೆಗೆ ನ್ಯೂಕ್ಲಿಯಸ್‌ಗಳಾಗಿ ಕಾರ್ಯನಿರ್ವಹಿಸುವ ಕಣಗಳ ಉಪಸ್ಥಿತಿ ಸೇರಿದಂತೆ ಹಲವಾರು ಅಂಶಗಳ ಮೇಲೆ ಅವಲಂಬಿತವಾಗಿದೆ.

ಮಳೆಯು ರೂಪುಗೊಳ್ಳಲು ಮೋಡವು ನೀರಿನ ಆವಿಯ ರೂಪದಲ್ಲಿ ಸಾಕಷ್ಟು ಪ್ರಮಾಣದ ತೇವಾಂಶವನ್ನು ಹೊಂದಿರಬೇಕು ಮತ್ತು ಮೋಡದೊಳಗಿನ ಗಾಳಿಯ ಪ್ರವಾಹಗಳ ಮೇಲ್ಮುಖ ಚಲನೆಯನ್ನು ಜಯಿಸಲು ಹನಿಗಳು ಸಾಕಷ್ಟು ದೊಡ್ಡದಾಗಿರಬೇಕು. ಹನಿಗಳು ಘರ್ಷಣೆ ಮತ್ತು ಒಗ್ಗೂಡುವಿಕೆ ಅಥವಾ ಮಂಜುಗಡ್ಡೆ ಸ್ಫಟಿಕ ಒಟ್ಟುಗೂಡಿಸುವಿಕೆಯ ಪ್ರಕ್ರಿಯೆಯ ಮೂಲಕ ಸಾಕಷ್ಟು ದೊಡ್ಡದಾಗಿ ಬೆಳೆಯಬೇಕು ಮತ್ತು ಮಳೆಯಾಗಿ ನೆಲಕ್ಕೆ ಬೀಳುವಷ್ಟು ಭಾರವಾಗಿರಬೇಕು. ಹನಿಗಳು ಸಾಕಷ್ಟು ಭಾರವಾದ ನಂತರ, ಮಳೆಯಾಗಿ ನೆಲಕ್ಕೆ ಬೀಳಲು ಪ್ರಾರಂಭಿಸುತ್ತವೆ.

ಮೋಡವು ಸಾಕಷ್ಟು ತೇವಾಂಶವನ್ನು ಹೊಂದಿಲ್ಲದಿದ್ದರೆ, ಹನಿಗಳನ್ನು ತಂಪಾಗಿಸುವ ಕಾರ್ಯವಿಧಾನವು ಸಂಭವಿಸದಿದ್ದರೆ ಅಥವಾ ಹನಿಗಳು ನೆಲಕ್ಕೆ ಬೀಳುವಷ್ಟು ದೊಡ್ಡದಾಗಿ ಬೆಳೆಯದಿದ್ದರೆ, ಮೋಡವು ಮಳೆಯನ್ನು ಉಂಟುಮಾಡುವುದಿಲ್ಲ. ಇದಕ್ಕಾಗಿಯೇ ಕೆಲವು ಮೋಡಗಳು ಗಾಢವಾಗಿದ್ದರೂ ವಾಸ್ತವವಾಗಿ ಮಳೆಯನ್ನು ಉಂಟುಮಾಡುವುದಿಲ್ಲ.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA

## ಕವಿ ಮನಸು

### ಅಕ್ಷಯ

ಅಕ್ಷಯ ತೃತೀಯದ ಸುದಿನ
ಬಂಗಾರದತ್ತ ಎಲ್ಲರ ಗಮನ
ಖರೀದಿಸಲು ಮುಗಿಬೀಳುವರು ಜನ
ಚಿನ್ನದ ಬೆಲೆ ಏರಿದೆ ಗಗನ

ಅಕ್ಷರಧರಸಿಗೆ ನಮ್ಮ ನಮನ
ಪ್ರಾರಂಭಿಸುವರು ಅಕ್ಷರ ಅಭ್ಯಾಸವನ್ನ
ಅಪಾರವು ಅಕ್ಷಯ ತೃತೀಯದ ಮಹಿಮೆ
ಗಂಗೆಯು ಭೂಸ್ಪರ್ಶವಾದ ಗರಿಮೆ

ಪ್ರಹ್ಲಾದನಿಗೆ ಉಗ್ರನರಸಿಂಹನ ದರುಶನ
ಪರಶುರಾಮ ಬಸವಣ್ಣ ಮಹನೀಯರ
ಜನನ
ಕುಬೇರನಿಗೆ ಅಷ್ಟೈಶ್ವರ್ಯದ ಪ್ರಧಾನ
ಈ ದಿನದ ಮಹಿಮೆಗೆ ಪುರಾಣವೇ
ಪ್ರಮಾಣ

ಭಕ್ತಿಯಿಂದ ನಾರಾಯಣನ ಭಜಿಸೋಣ
ಭಕ್ತವತ್ಸಲನ ಕೃಪೆಗೆ ಪಾತ್ರರಾಗೋಣ

– ಚೇತನ ಭಾರ್ಗವ
ಬೆಂಗಳೂರು

### ಮಮತೆಯ ಕಡಲು

ಅಮ್ಮ ಎಂದರೆ ಸೃಷ್ಟಿಯ ಸಾಹಿತ್ಯ
ಅವಳೋ ಪದಗಳಿಗೆ ನಿಲುಕದ ಕಾವ್ಯ.
ತಾಯಿಯ ಕಂಡರೆ ಯತಿರಾಜನಿಗೂ
ಬಾಗುವುದು ಕಾಯ
ಅಮ್ಮ ನೀ ಜೊತೆಯಲಿದ್ದರೆ ಮನವು
ಪ್ರೀತಿ ಮಯ.

ಪ್ರತಿ ಜೀವಿಯ ಆದಿ ನೀ ಅಲ್ಲವೇ ಅಮ್ಮ
ಜೊತೆಗಿದ್ದು ಕಳೆಯುವೆ ಮನದ ತಮ.
ಜನನಿ ಪ್ರಕೃತಿಯ ದೈವತ್ವದ ಸತ್ವ
ಸಹನೆ, ಸಹಬಾಳ್ವೆ ನೀ ಸಾರುವ ತತ್ವ.

ಮಕ್ಕಳ ಏಳಿಗೆಗಾಗಿ ದುಡಿಯುವ ತಪಸ್ವಿ
ಎನ್ನ ಕಾಲವೆಲ್ಲಾ ಕಾಯುವಂತಾ ಓಜಸ್ವಿ.
ಅಮ್ಮ ನೀನೊಂದು ಮಮತೆಯ ಕಡಲು
ಸದಾ ನಿನ್ನ ಸನಿಹ ಬಯಸುವುದು ಈ
ಒಡಲು.

– ಮಂಜುಶ್ರೀ ಮುರಳೀಧರ್.
ತೋರಣಗಲ್ಲು, ಬಳ್ಳಾರಿ.

### ಪ್ರಜಾಪ್ರಭುತ್ವದ ದಾರಿಯಲ್ಲಿ..

ಆ ಸರ್ಕಲ್ ನ ಮುಖ್ಯ ರಸ್ತೆಯಲ್ಲಿ ವಾಹನಗಳನ್ನು ಪೋಲಿಸರು ತಡೆ ತಡೆದು ನಿಲ್ಲಿಸುತ್ತಿದ್ದರು. ಕೆಲವು ವಾಹನಗಳು ನಿಂತಲ್ಲಿಯೇ ನಿಂತಿದ್ದರೆ, ಮತ್ತೊಂದಿಷ್ಟು ಜನರು ರಿವರ್ಸಾಗಿ ಪರ್ಯಾಯ ದಾರಿಯನ್ನು ಹುಡುಕುತ್ತಾ ತಮ್ಮ ಪಾಡಿಗೆ ಏನೇನೋ ಗೊಣಗುತ್ತಾ ಸಾಗುತ್ತಿದ್ದರು. ಅದೇ ರೋಡಿನಲ್ಲಿ ಅವಸರವಸರವಾಗಿ ಮುದುಕನೊಬ್ಬ ಎತ್ತಿನ ಬಂಡಿಯಲ್ಲಿ ಬರುತ್ತಿರುವಾಗ ಎತ್ತುಗಳು ಬೆದರಿ ಆ ನಿಷೇಧಿತ ವಲಯದೊಳಗೆ ನುಗ್ಗಿಬಿಟ್ಟವು.ಆ ಮುದಿ ವಯಸ್ಸಿನಾತ ಅವುಗಳನ್ನು ಹಿಡಿದೆಳೆದು ನಿಲ್ಲಿಸಲು ಪ್ರಯಾಸ ಪಡುತ್ತಿದ್ದ. ಇತ್ತ ಪೋಲೀಸರ ಸಿಟ್ಟು ನೆತ್ತಿಗೇರಿ " ಲೇ.. ಮಗನೇ ಸೈಡ್ ಗೆ ಹೊಡ್ಕಳೋ.. " ಗದರುತ್ತಾ ಬದಿಯಲ್ಲಿ ಕರೆಸಿ ಹೊಡೆಯುತ್ತಿದ್ದರು."ಇಲ್ರೀ ಸಾಗದ್ಲುಕ್ಕಾ ಎತ್ತು ಬೆದರಿ, ನಿಂತ್ಕಳ್ಳಿಲ್ಲಾ" ಎಂದೇಳುತ್ತಿದ್ದ ಆ ಬಡಕಲು ಶರೀರದ ದೇಹ ಪೋಲೀಸರ ಹೊಡೆತಗಳಿಗೆ ದೀನವಾಗಿ ಬೇಡುತ್ತಿತ್ತು. ಅತ್ತ ಕಡೆಯ ದಾರಿಯಲ್ಲಿ ಪೋಲೀಸು ಕಾರುಗಳ ಸರ್ಪಗಾವಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಕಾರು ಸರಾಗವಾಗಿ ಸಾಗುತ್ತಿತ್ತು.

–ನಾಗರಾಜ ಮಗ್ಗದ ಕೊಟ್ಟೂರು.

ಮಳೆಯಿಂದಾದ ಸಮಸ್ಯೆ ಮತ್ತು ಹಾನಿಯ ಫೋಟೋಗಳನ್ನ ಕ್ಲಿಕ್ಕಿಸಿದ್ದರೆ, ಸಂಕ್ಷಿಪ್ತ ಮಾಹಿತಿಯೊಂದಿಗೆ ಹಂಪಿ ಟೈಮ್ಸ್‌ಗೆ ಕಳುಹಿಸಿ

**94486 33038**

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಬಾಗೇವಾಡಿಯ ಭಾಗ್ಯರವಿ ಭಕ್ತಿ ಭಂಡಾರಿ ಬಸವಣ್ಣನಾದ



ಪ್ರಾಚೀನ ಕರ್ನಾಟಕದ ಇತಿಹಾಸವನ್ನು ಗಮನಿಸಿದಾಗ ಸಾಮಾನ್ಯವಾಗಿ ದೇವಸ್ಥಾನಗಳು ವಿಧ್ಯಾಕೇಂದ್ರಗಳಾಗಿದ್ದುದ್ದು ಕಂಡು ಬರುತ್ತದೆ. ಅಧ್ಯಯನದ ಉದ್ದೇಶಕ್ಕಾಗಿ ಬ್ರಾಹ್ಮಣರಿಗೆ ರಾಜರು ದಾನವಾಗಿ ಕೊಟ್ಟ ಗ್ರಾಮಗಳನ್ನು ಅಗ್ರಹಾರವೆಂದು ಕರೆಯುತ್ತಿದ್ದರು.

ಹೀಗೆ ಮಹಾ ಅಗ್ರಹಾರ ವೆಂದು ಗೌರವ ಹೊಂದಿದ ಬಾಗಲಕೋಟೆ ಜಿಲ್ಲೆ 'ಬಾಗೇವಾಡಿ'ಯ 'ಅಗ್ರೇಸರ' ಅಂದರೆ ಆ ಪಟ್ಟಣದ ಮುಖ್ಯಸ್ಥ ಮಂಡೆಗೆಯ ಮಾದಿರಾಜ. ಆತನಿಗೆ ಅನುರೂಪರಾದ ಹೆಂಡತಿ ಸಾತ್ವಿಕತೆಯೇ ಸ್ತ್ರೀಯಾಗಿ ನಿಂತಿರುವ ಮಾದಾಂಬೆ, ಮಾದಲಾಂಬಿಕೆ. ಈ ಕುಟುಂಬ ಸರ್ವರಿಂದಲೂ ಗೌರವಿಸಲ್ಪಡುತ್ತಿತ್ತು.

ಮಾದಿರಾಜ ಮಾದಲಾಂಬಿಕೆಯರಿಗೆ ದೀರ್ಘಕಾಲದ ವರೆಗೆ ಪುತ್ರ ಸಂತಾನವಾಗಲಿಲ್ಲ. ಸಾಧ್ವಿ ಮಾದಲಾಂಬಿಕೆಯ ಸಾತ್ವಿಕ ಬದುಕೆ ಸಾಕಾರ ಗೊಂಡಂತೆ ಕೊನೆಗೂ ಅವಳ ಉದರದಿಂದ ಪುಣ್ಯ ಶಿಶು ಒಂದು ಉದಿಸಿತು. ಆ ಮುದ್ದಾದ ಶಿಶು ಅದೇ ಆಗ ಚಿಪ್ಪೊಡೆದು ಹೊರಬಂದ ಮುತ್ತಿನಂತೆ, ನಿರಭ್ರ ನೀಲಾಕಾಶದಲ್ಲಿ ಪ್ರಶಾಂತವಾಗಿ ಬೆಳಗುವ ಚಂದ್ರನಂತೆ, ಸರೋವರದಲ್ಲಿ ಇಬ್ಬನಿಯಿಂದಾ ವ್ರತವಾಗಿ ಅರಳಿ ನಿಂತ ಕಮಲದಂತೆ, ಏನೆಲ್ಲ ಹೇಳಿದರು ಆ ಮುದ್ದು ಮಗುವನ್ನು ಪೂರ್ಣ ವರ್ಣಿಸಿದಂತಾಗುವುದಿಲ್ಲ. ಮಕ್ಕಳೇ ಹಾಗಲ್ಲವೇ? ಪಾವಿತ್ರದ ಪ್ರತೀಕಗಳು. ಬಾಗೇವಾಡಿಯಲ್ಲುದಿಸಿದ ಈ ಭಾಗ್ಯರವಿಗೆ 'ಬಸವ' ಎಂದು ಹೆಸರಿಡಲಾಯಿತು. ಎಲ್ಲರ ಮುದ್ದಿನ ಕಣ್ಮಣಿಯಾಗಿ ಬೆಳೆದ ಬಸವ ಬಾಲಕನಾದ. ಬಲು ಕುಶಾಗ್ರಮತಿ ಮತ್ತು ಸೂಕ್ಷ್ಮ ಸಂವೆಧಿಯಾಗಿದ್ದ. ದಿನ ನಿತ್ಯ ಮನೆಯಲ್ಲಿ ವಿದ್ವಾಂಸರ ಘೋಷ್ಠಿಗಳು ವೇದ, ಮಂತ್ರ ಪಠಣ, ಜಿಜ್ಞಾಸೆ, ಅಸಂಖ್ಯಾತ ಶ್ಲೋಕಗಳು ಬಸವನಿಗೆ ನಿರರ್ಗಳವಾದವು. ಉಪನಿಷತ್ತಿನ ಶ್ಲೋಕಗಳು ತುದಿನಾಲಿಗೆಯ ಮೇಲೆ ನಲಿದಾಡಿದವು. ಮಾದಿರಾಜನಿಗೆ ಹಿಗ್ಗೊ ಹಿಗ್ಗು, ತನ್ನ ಮಗ ವಂಶದ ಕೀರ್ತಿಯನ್ನು ಬೆಳಗುತ್ತಾನೆ. ಬ್ರಾಹ್ಮಣ ಸಮುದಾಯದ ಸಮರ್ಥ ನಾಯಕನಾಗಿ ಬೆಳೆದು ಅಗ್ರೇಸರ ಪಟ್ಟಣದ ಗೌರವವನ್ನು ದ್ವಿಗುಣಗೊಳಿಸುತ್ತಾನೆ ಎಂದುಕೊಂಡಿದ್ದರು. ಯಾರ್ಯಾರ ಬದುಕು ಹೇಗೆಗೆ ಬದಲಾಗುತ್ತದೆ ಎಂದು ಬಲ್ಲವರಾರು? ಸೂಕ್ಷ್ಮ ಸಂವೇದನಾಶೀಲನಾದ ಬಸವಣ್ಣನಿಗೆ ತನ್ನ ಪರಿಸರದ ಬ್ರಾಹ್ಮಣ ವರ್ಗದ ಜೀವನ ಬೇಸರ ತರಿಸಿತು, ಇವರ ನಡೆಯೊಂದು ಪರಿ ನುಡಿಯೊಂದು ಪರಿ ಎನ್ನಿಸತೊಡಗಿತು. 'ಯತ್ರ ನಾರೇಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಹ:' ಎಂದರೆ ಎಲ್ಲಿ ಹೆಣ್ಣು ಮಕ್ಕಳು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಇರುತ್ತಾರೆ. ಎಂದು ಒಂದು ಕಡೆ ಹೇಳುವುದು ಇನ್ನೊಂದೆಡೆ ಅವರಿಗೆ ಧಾರ್ಮಿಕ ಹಕ್ಕನ್ನು ನೀಡದೆ ಅವರ ಮುಕ್ತಿಗೆ ಒಡ್ಡಿದ ಅಡೆತಡೆ ಎಂದು ಭಾವಿಸುವುದು, ಒಳ ಹೊರಗೆ ಒಂದೇ ಇರಬೇಕು ಅಂತ: ಕರಣ ನಿರ್ಮಲವಾಗಿರಬೇಕು. ನಿಜವಾಗಿ ಎಲ್ಲ ಜೀವಿಗಳಲ್ಲಿಯೂ ದೇವರನ್ನು ಕಾಣುವಂತಹ ಆಗಬೇಕು ಎಂದು ಬಸವ ಬಯಸುತ್ತಿದ್ದ. ಆತ ಬೆಳದಂತೆ ಆಲೋಚನಾ ಶಕ್ತಿಯು ಬೆಳೆಯಿತು. ವೇದಶಾಸ್ತ್ರ ಪುರಾಣಗಳನ್ನು ದಾಟಿಕೊಂಡು ಬ್ರಾಹ್ಮಣರ ಶುಷ್ಕ ಸಂಸ್ಕಾರಗಳನ್ನು ದಾಟಿಕೊಂಡು ಅಗ್ರಹಾರದ ವಿಧಿ ನಿಯಮಗಳನ್ನು ದಾಟಿಕೊಂಡು ಜನದತ್ತ ನಿಜದ ಜಗದತ್ತ ನಡೆಯಲು ಬಸವನ ಮನಸ್ಸು ಹಾತೊರೆಯ ತೊಡಗಿತು.

ಬಸವನಿಗೆ ಆಗ 8 ವರ್ಷ ವೈದಿಕ ಸಂಸ್ಕಾರದ ನಿಯಮಾನಸಾರ ಉಪನಯನವಾಗಬೇಕು, ಬ್ರಾಹ್ಮಣನೀಗಾಗಲೇ ಬೇಕಾದ ಷೋಡಷ ಸಂಸ್ಕಾರಗಳಲ್ಲಿ ಉಪನಯನವು ಒಂದು. ಉಪನಯನ ಕಾಲದಲ್ಲಿ ಅವನು ಜನಿವಾರ ಧರಿಸಲೇ ಬೇಕಾಗಿತ್ತು. ಈಗಾಗಲೇ ಇಂತಹ ಸಂಸ್ಕಾರಗಳನ್ನು ಹೊಂದಿಯೂ ಸ್ವಾರ್ಥ ಪರ ಬದುಕನ್ನು ಸಾಗಿಸುತ್ತಿರುವವರನ್ನು ಕಂಡಿದ್ದ ಬಸವನಿಗೆ ಜನಿವಾರ ಧರಿಸುವುದು ಅರ್ಥಹೀನವೆನಿಸಿತು. ಹಾಗಾಗಿ ಉಪನಯನ ಮಾಡಿಸಿಕೊಳ್ಳುವುದಿಲ್ಲವೆಂದು, ಜನಿವಾರ ಧರಿಸುವುದಿಲ್ಲವೆಂದು ಹಠ ಹಿಡಿದನು. ತಿಳುವಳಿಕೆ ಹೇಳಿದ ತಂದೆಗೆ 'ದೇವ ಮೆಚ್ಚುವದು ಭಕ್ತಿಗೆ ವಿನಃ ಆಚರಣೆಗೆ ಅಲ್ಲ ಎಂಬುದನ್ನು ಬೇಡರ ಕಣ್ಣಪ್ಪನ ಕಥೆ ಹೇಳುವಾಗ ನೀವೇ ಹೇಳಿಲ್ಲವೇ' ? ಎಂದು ತಂದೆಯನ್ನು ಪ್ರಶ್ನಿಸಿದನು. ತಂದೆ ಹಲವಾರು ರೀತಿಯಲ್ಲಿ ತಿಳಿ ಹೇಳಿದರು ನಂತರ ವಾತ್ಸಲ್ಯಮಯಿ ತಾಯಿಯ ಮನಸ್ಸನ್ನು ನೋಯಿಸಬಾರದೆಂದು ತಿಳಿದು ಮನಸ್ಸಿನ ಮನಸ್ಸಿಲ್ಲದಿದ್ದರೂ ಉಪನಯನಕ್ಕಾಗಿ ಒಪ್ಪಿಕೊಂಡನು.

ಡಾಂಭಿಕ ಭಕ್ತಿಯನ್ನು ನವಿರಾಗಿಯೇ ಟೀಕಿಸುತ್ತಿದ್ದ ವರ್ಣಾಶ್ರಮದ ಪದ್ಧತಿಯನ್ನು ವಿರೋಧಿಸುತ್ತಿದ್ದನು. ಬಸವನ ವಿರುದ್ಧ ನಿತ್ಯ ದೂರುಗಳು ತಂದೆಗೆ ಬರತೊಡಗಿದವು. ಅಗ್ರೇಸರ ಮನೆಯಲ್ಲಿ ಒಂದು ದಿನ ಚರ್ಚೆಗೋಸ್ಕರ ವಿದ್ವಾಂಸರ ಕೂಟ ನೆರೆದಿತ್ತು. 'ಮಾಯೆಯನ್ನು ಗೆಲ್ಲುವುದು ಹೇಗೆ'? ಎಂಬುದೇ ವಿಷಯ. ಒಬ್ಬ ವಿದ್ವಾಂಸ ಹೆಣ್ಣು ಮಾಯೆ ಎಂಬುದನ್ನು ವಾದಿಸುತ್ತಿದ್ದ. ಹೆಣ್ಣು, ಜೂಜು, ಸೇರೆ, ಇವು ಕೆಟ್ಟ ವಸ್ತುಗಳೆಂದು ವಾದಿಸಿದನು. ಮತ್ತೊಬ್ಬನು ಹೆಂಗಸು 'ಕನಿಷ್ಠ' ಅವಳಿಗೆ ಅದಕ್ಕಾಗಿ ಉಪನಯನ ನಿರಾಕರಿಸಿದ್ದಾರೆ. ಮಹರ್ಷಿ ಮನು ಹೆಣ್ಣು ಮಕ್ಕಳಿಗೆ ಉಪನಯನ ನಿರಾಕರಿಸಿದ್ದಾರೆ. ಕೇಳುತ್ತಾ ಕುಳಿತ ಬಸವನಿಗೆ ತಡೆಯಲಾಗಲಿಲ್ಲ. ನಿಲ್ಲಿ! ಮಾತು ಗಂಟೆ ಹೊಡೆದಂತೆ ಮೊಳಗಿತು. ಎದ್ದು ನಿಂತು ಸಭೆಗೆ ಕೈಮುಗಿದು ದೃಢವಾದ ಧ್ವನಿಯಲ್ಲಿ ಮಾತನಾಡತೊಡಗಿದ.

ಏಕೆ? ಉಪನಿಷತ್ ಕಾಲದಲ್ಲಿ ತಾಯಂದಿರಿಗೆ ಧಾರ್ಮಿಕ ಸ್ವಾತಂತ್ರ್ಯ ಇರಲಿಲ್ಲವೇ? ಅವರು ಯಜ್ಞ ಯಾಗಾದಿಗಳನ್ನು ಮಾಡುತ್ತಿರಲಿಲ್ಲವೇ? ಅಪಾಲ, ವಿಶ್ವವಾರ, ಇಂದ್ರಾಣಿ, ಇವರೆಲ್ಲ ಮಂತ್ರ ರಚಿಸುತ್ತಿದ್ದರೆಂಬುದು ನಿಮಗೆ ತಿಳಿಯದೆ? ಲೋಪ ಮುದ್ರೆ ವಿಶ್ವ ವಾರ ಘೋಷ ಇವರನ್ನು ಬ್ರಹ್ಮವಾದಿನಿಯರೆಂದು ಋಗ್ವೇದ ಕರೆದಿದೆಯಲ್ಲವೇ? ಹೀಗಿರುವಾಗ ನೀವು ಸ್ತ್ರೀಗೆ ಧಾರ್ಮಿಕ ಸಂಸ್ಕಾರಗಳನ್ನೇಕೆ ನಿಶೇದಿಸುತ್ತಿರುವಿರಿ? ಆ ತಾಯಿಯಂದಿರು ಮಾಡಿದ ಪಾಪವಾದರೂ ಏನು? ಮಾತು ಕಲ್ಲೊಳಿಟ್ಟ ಅಕ್ಷರದಂತೆ ಖಚಿತವಾಗಿತ್ತು. ಸಭೆಯ ನಡುವಿಂದ ಪ್ರಶ್ನೆಯೊಂದು ತೂರಿ ಬಂತು 'ಆಯ್ತಪ್ಪ ಬಸವ ಇಷ್ಟೆಲ್ಲಾ ಹೇಳುವ ನೀನು, ನೀನೆ ಏಕೆ ನಿನ್ನ ಸೋದರಿಗೆ ಉಪನಯನ ಸಂಸ್ಕಾರಕ್ಕೆ ಏರ್ಪಾಡು ಮಾಡಬಾರದು'? ಕೂಡಲೇ ಬಸವ ಉತ್ತರಿಸಿದ. 'ಹೌದು' ಪೂಜ್ಯರೇ ಆ ಪ್ರಶ್ನೆಯನ್ನು ದೇವರೇ ನಿಮ್ಮ ಬಾಯಲ್ಲಿ ಹೇಳಿಸಿದ್ದಾನೆ. ಅಕ್ಕ ನಾಗಮ್ಮನಿಗೆ ಏಕೆ ಸಂಸ್ಕಾರ ಮಾಡಬಾರದು? ಎಂದಾಗ ಸಭೆಯ ತುಂಬಾ ಕೋಲಾಹಲ ವೇದ್ದಿತು. ಧರ್ಮ ವಿರುದ್ಧವಾಗಿ ಮಾತನಾಡುವ ಈತನನ್ನು ಬಹಿಷ್ಕರಿಸಿ, ಇವನನ್ನು ಗಡಿ ಪಾರು ಮಾಡಿ, ಬ್ರಾಹ್ಮಣ್ಯ ವನ್ನೇ ತಿರಸ್ಕಾರದಿಂದ ನೋಡುವ ಈತನಿಗೇಕೇ ಜನಿವಾರ? ಎಂದಾಗ ಬಸವ ತಟ್ಟನೆ ಎದ್ದುನಿಂತು 'ಅಕ್ಕನಾಗಮ್ಮನಿಗೆ ಉಪನಯನ ಸಂಸ್ಕಾರವಿಲ್ಲವೆಂದಾದ ಮೇಲೆ ಜನಿವಾರ ಇಲ್ಲವಾದ ಮೇಲೆ ನನಗಾದರೂ ಏಕೆ ? ಇಗೊ ತೆಗೆದುಕೊಳ್ಳಿ, ಈ ನಿಮ್ಮ ಜನಿವಾರ'. ಎಂದು ತಟ್ಟನೆ ಜನಿವಾರವನ್ನು ಹರಿದೊಗೆದ. ಇಲ್ಲಿಗೆ ಈ ಅಗ್ರಹಾರದ ಸಂಬಂಧ ಮುಗಿಯಿತೆಂದು ಕೈಮುಗಿದು ಬಿರೆಬರನೇ ನಡೆದೇ ಬಿಟ್ಟ. ಕೆಲ ದಿನಗಳ ಮಟ್ಟಿಗೆ ಬಸವನನ್ನು ಕಾಣಲೆಂದೇ ತವರಿಗೆ ಬಂದಿದ್ದ ಆ ತಾಯಿ ನಡೆದ ಘಟನೆಯಿಂದ ಬೇಸತ್ತು, ಅವನ ಹಿಂದೆ ಹಿಂದೆ ಹೋಗುತ್ತಾ ' ಬಸವಾ ' ಎಂದು ಕೂಗಿ ನಿಲ್ಲಿಸಿದಳು. ನೀನು ಎಲ್ಲಿಗೆ ಹೊರಟಿರುವೆ. ನೀನಿಲ್ಲದ ಮನೆಯಲ್ಲಿ ನಾನಿರಲಾರೆ ನನ್ನ ಪತಿ ಮನೆಗೆ ಹೊರಟಿರುವೆ, ನನ್ನೊಡನೆ ಕೂಡಲಸಂಗಮಕ್ಕೆ ಬಾ ಅಲ್ಲಿ ಸಂಗಮನಾಥ ಇದ್ದಾನೆ. ಸಂಗಮೇಶ್ವರ ಗುರುಗಳಿದ್ದಾರೆ. ಎಂದು ಬಸವನನ್ನು ಕರೆದುಕೊಂಡು ಕೂಡಲಸಂಗಮದತ್ತ ನಡೆದಳು. ಬಸವನೂ ನಡೆದ ಭವಿಷ್ಯವನ್ನರಸುತ್ತಾ, ಬೆಳಕನ್ನರಸುತ್ತಾ. ಹೀಗೆ ಸಂಗಮನಾಥನಲ್ಲಿ ಆತನಿಗೆ ತನಗರಿಯದಂತಹ ಭಕ್ತಿ ತಲೆದೋರಿತ್ತು. ಸಂಗಮನಾಥನನ್ನು ದರ್ಶಿಸುತ್ತಿದ್ದಂತೆ ಕಣ್ಣಿನಿಂದ ಧಾರಾಕಾರದ ಹರ್ಷದ ಹೊನಲು ಹರಿಯಿತು. ತನ್ನೆಲ್ಲ ಐಹಿಕ ಸಂಬಂಧಗಳನ್ನು ತ್ಯಜಿಸಿ ಬಂದ ಬಸವ ಸಂಗಮನಾಥನನ್ನೇ ನೋಡುತ್ತಾ, ನನಗೆ ಮತ್ತಾರು ಇಲ್ಲವಯ್ಯ ಕೂಡಲಸಂಗಮದೇವ. ಹಾಲಲ್ಲದ್ದು ನೀರಲ್ಲದ್ದು ನಿಮ್ಮ ಧರ್ಮ" ಸರ್ವಾರ್ಪಣ ಭಾವದಿಂದ ಶುಶ್ರಾವ್ಯ ಕಂಠ ದಿಂದ ಬಸವೇಶ ಹಾಡುತ್ತಿದ್ದರೆ, ದೇವಾಲಯಕ್ಕೆ ಬಂದವರೆಲ್ಲ ಚಿತ್ರದಲ್ಲಿ ಬರೆದ ಬೊಂಬೆಯಂತಾಗಿ ಬಿಟ್ಟರು. ಹೀಗೆ ಕೆಲ ದಿನಗಳವರೆಗೆ ಸಂಗಮನಾಥನಲ್ಲೇ, ನಿಸರ್ಗದ ಮಡಿಲಿನಲ್ಲಿ ಸಂತೋಷವಾಗಿದ್ದ ಬಸವೇಶ ಅಕ್ಕ ನಾಗಲಾಂಬಿಕೆಯ ಹತ್ತಿರ ಹೋಗಬೇಕೆಂದ. ಬಿಜ್ಜಳ ರಾಜನಲ್ಲಿ ಕೋಶಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಮಾವ ಬಲದೇವ ಬಸವೇಶನಿಗೆ ಅಲ್ಲಿಯೇ ಕೆಲಸ ಕೊಡಿಸಿದ. ಬಿಜ್ಜಳನಿಗೂ ಬಸವಣ್ಣನಿಗೂ ಅನ್ಯೋನ್ಯತೆ ಬೆಳೆಯಿತು. ಬಿಜ್ಜಳನ ರಾಜಧಾನಿ ಮಂಗಳ ವೇಡದಿಂದ ಕಲ್ಯಾಣಕ್ಕೆ ಸ್ಥಳಾಂತರವಾದರೂ. ಈಗ ಬಸವಣ್ಣ ಹಿರಿಯ ಸಾಮ್ರಾಜ್ಯವೊಂದರ ಮುಖ್ಯ ಭಂಡಾರಿ. ಅತ್ಯುನ್ನತ ಹುದ್ದೆಯ ಪ್ರಭಾವಶಾಲಿ ಅಧಿಕಾರಿಯಾದರು.

ಮತ್ತೆ ಹಲವಾರು ಘಟನೆಗಳ ನಂತರ ಬಸವಣ್ಣ ಅಧಿಕಾರವನ್ನೆಲ್ಲ ತ್ಯಜಿಸಿ ಮತ್ತೆ ಕೂಡಲಸಂಗಮದ ಹಾದಿ ಹಿಡಿದನು. ಅಲ್ಲಿ ಅನುಭವ ಮಂಟಪದ ಸಾಮೀಪ್ಯಕ್ಕೆ ಬಂದನು. ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ವಚನಗಳನ್ನು ರಚಿಸಿದರು. ಕೊನೆಗೆ ತಮ್ಮ ಕೊನೆಗಳಿಗೆಯನ್ನು ಕೂಡಲಸಂಗಮದಲ್ಲಿ ಐಕ್ಯವಾಗುವುದರ ಮೂಲಕ ಭಕ್ತರ ಮನದಲ್ಲಿ ಈಗಲೂ ಆರಾಧ್ಯ ದೇವರಾಗಿಯೇ ಉಳಿದುಕೊಂಡಿದ್ದಾರೆ. ಹೀಗೆ ಅಸಂಖ್ಯಾತ ನೊಂದ ಹೃದಯಗಳಿಗೆ ಸಾಂತ್ವನ ನೀಡುವ ತಾಯಿಯಾಗಿ. ಕಂಬನಿ ವರೆಸುವ ಕೈಯಾಗಿ. ದೀನ ದಲಿತ ದುರ್ಬಲರಲ್ಲಿ ಆತ್ಮಭಿಮಾನ ಬಾನತ್ತರಕ್ಕೆ ಬೆಳೆದು ನಿಲ್ಲುವಂತೆ ಮಾಡಿದ, ಹೆಣ್ಣು ಗಂಡು, ಬಡವ ಬಲ್ಲಿದ, ಮೇಲು ಕೀಳೇನ್ನದೆ ಸರ್ವರನ್ನು ಸಮಾನವಾಗಿ ಕಂಡ ಮಾನವತೆಯ ಹರಿಕಾರ, ಮಹಾ ಮಾನವತಾವಾದಿ, ದಯೆಯೇ ಧರ್ಮವೆಂದು ಸಾರಿದ ದಯಾ ಮೂರ್ತಿ, ಭಕ್ತಿ ಭಂಡಾರಿ ಬಸವಣ್ಣನವರು ಆದರ್ಶಪ್ರಾಯರು



ಉಮಾ ಗವೀಶ ಕಲ್ಮಠ.
ಶಿಕ್ಷಕಿ, ಅಳವಂಡಿ.ಕೊಪ್ಪಳ

Hampi Times E-paper
SCAN AND READ

# ರೈತರ ಖಾತೆಗೆ 130 ಕೋಟಿ ರೂ. ಬೆಳೆ ಪರಿಹಾರ ಸಂದಾಯ

## ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ, ಜಿಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

2023–24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆಹಾನಿಗೆ ಎಸ್.ಡಿ.ಆರ್.ಎಫ್ ಹಾಗೂ ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಅರ್ಹತೆಯ ಅನುಗುಣವಾಗಿ ಈಗಾಗಲೇ ಅರ್ಹ ರೈತರಿಗೆ ಗರಿಷ್ಟ 2000 ರೂ.ರವರೆಗೆ ಅರ್ಹತೆಯಂತೆ ಪಾವತಿಸಿರುವ ಬೆಳೆಹಾನಿ ಪರಿಹಾರ ಮೊತ್ತವನ್ನು ಪರಿಗಣನೆಗೆ ತೆಗೆದುಕೊಂಡು ಅರ್ಹತೆಯಂತೆ ಇನ್ನುಳಿದ ಬಾಕಿ ಬೆಳೆಹಾನಿ ಪರಿಹಾರ ಮೊತ್ತವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡಿ ಸರ್ಕಾರದಿಂದ ಆದೇಶಿಸಲಾಗಿದೆ.

ಅದರಂತೆ ಬೆಳೆ ಸಮೀಕ್ಷೆ ದತ್ತಾಂಶದ ಮಾಹಿತಿಯ ಆಧಾರದ ಮೇಲೆ ಫ್ರೂಟ್ಸ್ ಐಡಿ ಹೊಂದಿರುವ ರೈತರಿಗೆ ಪರಿಹಾರ ತಂತ್ರಾಂಶದ ಮೂಲಕ ಹಂತಹಂತವಾಗಿ ಪರಿಹಾರ ವಿತರಣೆ ಮಾಡಲಾಗುತ್ತಿದ್ದು, ವಿಜಯನಗರ ಜಿಲ್ಲೆಯಲ್ಲಿ ಈವರೆಗೂ ಹತ್ತು ಹಂತಗಳಲ್ಲಿ ಒಟ್ಟು 1,09,543 ರೈತರಿಗೆ 130,08,07,810 ರೂ (ಒಂದು ನೂರಾ ಮೂವತ್ತು ಕೋಟಿ ಎಂಟು ಲಕ್ಷದ ಏಳು ಸಾವಿರದ ಎಂಟನೂರ ಹತ್ತು ರೂಪಾಯಿಗಳ ಮಾತ್ರ) ಇನ್ಪುಟ್ ಸಬ್ಸಿಡಿಯನ್ನು ಜಮಾ ಮಾಡಲು ಅನುಮೋದನೆ ನೀಡಲಾಗಿದ್ದು, ಸರ್ಕಾರದಿಂದ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಧನವನ್ನು ಜಮಾ ಮಾಡಲಾಗಿದೆ.

ಬಾಕಿ ಉಳಿದ ಅರ್ಹ ರೈತರಿಗೆ ಹಂತ–ಹಂತವಾಗಿ ಪರಿಹಾರ ಪಾವತಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಜಮಾ ಮಾಡಲಾಗುವುದು. ಈಗಾಗಲೇ ಅನುಮೋದನೆ ನೀಡಿರುವ ರೈತರ ಮಾಹಿತಿಯ ಪಟ್ಟಿಯನ್ನು ನಾಡ ಕಚೇರಿಗಳು, ಗ್ರಾಮ ಪಂಚಾಯತಿಗಳು ಹಾಗೂ ರೈತ ಸಂಪರ್ಕ ಕೇಂದ್ರಗಳು ಹಾಗೂ ತಹಸೀಲ್ದಾರರ ಕಚೇರಿಯ ಸೂಚನಾ ಫಲಕಗಳಲ್ಲಿ ಪ್ರಚುರಪಡಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ ತಾಲೂಕು ಕಚೇರಿ, ಹಗರಿಬೊಮ್ಮನಹಳ್ಳಿ ತಾಲೂಕು ಕಚೇರಿ, ಕೂಡ್ಲಿಗಿ ತಾಲೂಕು ಕಚೇರಿ, ಕೊಟ್ಟೂರ ತಾಲೂಕು ಕಚೇರಿ, ಹಡಗಲಿ ತಾಲೂಕು ಕಚೇರಿ ಮತ್ತು ಹರಪನಹಳ್ಳಿ ತಾಲೂಕು ಕಚೇರಿಗಳಲ್ಲಿನ ಸಹಾಯವಾಣಿಗಳಿಗೆ ಕಚೇರಿ ಸಮಯದಲ್ಲಿ ರೈತರು ಫ್ರೂಟ್ಸ್ ಐಡಿ ಸಂಖ್ಯೆಯೊಂದಿಗೆ ಸಂಬಂಧಪಟ್ಟ ತಾಲ್ಲೂಕು ಕಚೇರಿಯ ಸಹಾಯವಾಣಿಗೆ ಭೇಟಿ ನೀಡಿ ಬೆಳೆ ಪರಿಹಾರ ಮಾಹಿತಿ ಪಡೆಯಬಹುದಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ತಾಲೂಕುವಾರು ಮಾಹಿತಿ: ಹೊಸಪೇಟೆ ತಾಲೂಕಿನ 3,880 ರೈತರಿಗೆ 3,45,51,946 ರೂ., ಹಗರಿಬೊಮ್ಮನಹಳ್ಳಿ ತಾಲೂಕಿನ 15,813 ರೈತರಿಗೆ 19,24,12,902 ರೂ., ಕೂಡ್ಲಿಗಿ ತಾಲೂಕಿನ 19,010 ರೈತರಿಗೆ 23,12,23,100 ರೂ., ಕೊಟ್ಟೂರ ತಾಲೂಕಿನ 12,833 ರೈತರಿಗೆ 14,04,56,255 ರೂ., ಹಡಗಲಿ ತಾಲೂಕಿನ 20,925 ರೈತರಿಗೆ 26,93,01,607 ರೂ. ಮತ್ತು ಹರಪನಹಳ್ಳಿ ತಾಲೂಕಿನ 37,082 ರೈತರಿಗೆ 42,28,62,000 ರೂ.ನಂತೆ ವಿಜಯನಗರ ಜಿಲ್ಲೆಯಲ್ಲಿ ತಾಲೂಕುವಾರು ಬೆಳೆ ಪರಿಹಾರ ಮೊತ್ತ ಸಂದಾಯವಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.**

# ಅಬ್ಬರದ ಗುಡುಗು, ಸಿಡಿಲು ಮಳೆಗೆ ಧರೆಗುರುಳಿದ ಮರ

## ಹೊಸಪೇಟೆಯಲ್ಲಿ ತಗ್ಗು ಪ್ರದೇಶಕ್ಕೆ ನುಗ್ಗಿದ ನೀರು



**ಹಂಪಿ ಟೈಮ್ಸ್ ಹೊಸಪೇಟೆ :** ನಗರದಲ್ಲಿ ಶನಿವಾರ ರಾತ್ರಿ ಕೆಲ ನಿಮಿಷ ಗುಡುಗು, ಸಿಡಿಲು ಸಹಿತ ಸುರಿದ ಮಳೆಗೆ ನಗರದ ವಿವಿಧೆಡೆ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಹಲವೆಡೆ ಮರದ ರೆಂಬೆ ಕೊಂಬೆಗಳು ನೆಲಕ್ಕುರುಳಿವೆ.ನಗರದಮುಖ್ಯರಸ್ತೆಗಳಲ್ಲಿಯೇತಗ್ಗುಗುಂಡಿಗಳಿರುವುದರಿಂದ ಮಳೆ ನೀರು ನಿಂತು, ರಸ್ತೆಯಾವುದೋ, ಗುಂಡಿ ಯಾವುದೋ ಎಂಬುದು ತಿಳಿಯದೆ ವಾಹನ ಸವಾರರು ತಗ್ಗು, ಗುಂಡಿಗಳ ಭಯದೊಂದಿಗೆ ವಾಹನ ಚಲಾಯಿಸಿದರು. ಆಸ್ಪತ್ರೆ, ಮಾರುಕಟ್ಟೆಗೆ ಬಂದಿದ್ದ ಸಾರ್ವಜನಿಕರು ಮನೆಗೆ ಮರಳಲು ಆಟೋಗಳು ದೊರೆಯದ್ದರಿಂದ ಪರದಾಡಿದರು. ನಗರದ ಸುತ್ತಮುತ್ತ ಗ್ರಾಮಗಳಲ್ಲಿಯೂ ಮಳೆಯಾಗಿದೆ.

# ತಾಯ್ತನದ ಸವಿ

ತಾಯ್ತನ ಎಂಬುದು ಹೆಣ್ಣಿಗೆ ಭಗವಂತ ನೀಡಿರುವ ಒಂದು ವರ. ಪ್ರತಿಯೊಂದು ಹೆಣ್ಣಿಗೆ ತಾಯ್ತನ ತನ್ನೊಳಗೆ ಇರುತ್ತದೆ. ಅವಳು ತಾಯಿಯಾದಾಗ ಆ ತಾಯ್ತನಕ್ಕೆ ಒಂದು ಆಕಾರ ಬರುತ್ತದೆ.

ನನಗೆ ಪ್ರಸವದ ದಿನಾಂಕ ಹತ್ತಿರ ಬರುತ್ತಿದಾಗ ಮನಸ್ಸಿನಲ್ಲಿ, ನಾನು ಪ್ರಸವದ ನೋವು ಹೇಗೆ ತಡೆದುಕೊಳ್ಳುತ್ತೀನಿ, ನೋವಿನ ತೀವ್ರತೆ ಎಷ್ಟು ಇರುತ್ತದೆ , ನಾನು ಮಗುವನ್ನು ಸಂಭಾಳಿಸುವಲ್ಲಿ ಪ್ರಭುದ್ಧಳಾಗಿದ್ದೇನೋ ಇಲ್ಲವೋ ಇಂತಹ ಸಾವಿರಾರು ಪ್ರಶ್ನೆಗಳು ಉದ್ಭವಿಸುತ್ತಿತ್ತು. ಜಾಸ್ತಿ ಬೇಡದ್ದೆಲ್ಲಾ ಯೋಚಿಸಬೇಡ ಭಗವಂತನ ಸ್ಮರಣೆ ಮಾಡು ಅದೆಲ್ಲ ತನ್ನಿಂದ ತಾನೇ ಬರುತ್ತದೆ ಎಂದು ಅಮ್ಮ ಕಿವಿ ಮಾತನ್ನು ಹೇಳುತ್ತಿದ್ದರು. ಹೆರಿಗೆಯಾಗಿ ಕಂದನನ್ನು ನನ್ನ ಮಡಿಲಲ್ಲಿ ಮಲಗಿಸಿದ್ದಾಗ ಆದ ಮಧುರ ಅನುಭವವನ್ನು ವರ್ಣಿಸಲು ಸಾಧ್ಯವಿಲ್ಲ. ಕಂದನನ್ನು(ಮಗಳು) ನೋಡಿದೊಡನೆ ಹೆರಿಗೆಯಾಗುವಾಗ ಅನುಭವಿಸಿದ ನೋವು ಎಲ್ಲಾ ಮರೆತುಹೋಯಿತು. ಮೊದಲ ಪುಟ್ಟ ಪುಟ್ಟ ಕೈ ಕಾಲಿನ ಸ್ಪರ್ಶವನ್ನು ನೆನೆಸಿಕೊಂಡರೆ ಈಗಲೂ ಮೈ ರೋಮಾಂಚನಗೊಳ್ಳುತ್ತದೆ.



ಮಗುವಿನ ಜನನದೊಂದಿಗೆ ತಾಯಿಯ ಪುನರ್ಜನ್ಮವು ಆಗುತ್ತದೆ. ಮಗು ಜನಿಸಿದೊಡನೆ ತಾಯಿಯ ಪ್ರಪಂಚವೇ ಬೇರೆ ಆಗುತ್ತದೆ. ಆ ಮಗು ಒಂದೇ ಆಕೆಯ ಪ್ರಪಂಚ. ಸದಾ ಮಗುವಿನ ಬಗ್ಗೆಯೇ ಯೋಚಿಸುತ್ತಾ ಇರುತ್ತಾಳೆ. ಸ್ನೇಹಿತರೊಡನೆ ಮಾತನಾಡಬೇಕಾದರೂ ಕೂಡ ನಿಮ್ಮ ಮಗು ಯಾವ ಯಾವ ತಿಂಗಳಲ್ಲಿ ಏನೇನು ಮಾಡುತ್ತಿತ್ತು ಎಂದೆಲ್ಲಾ ಚರ್ಚಿಸುತ್ತಿರುತ್ತಾಳೆ.

ನನ್ನ ಮಗಳ ಮೊದಲ ನಗು ಕಂಡೊಡನೆ ಬೆಳದಿಂಗಳ ಚಂದಿರನೇ ಧರೆಗಿಳಿದು ಬಂದನೇನು ಅಂತ ಅನಿಸುತ್ತಿತ್ತು. ಮಗುಚಿಕೊಂಡು ನನ್ನೆಡೆ ತಿರುಗಿದಾಗ ನಾನೇನು ಸಾಧಿಸಿದ್ದೀನಿ ನೋಡಮ್ಮ ಅಂದ ಹಾಗೆ, ಮೊದಲು ಕುಳಿತುಕೊಂಡಾಗ, ಅಮ್ಮ ನಾನು ಇಡೀ ಜಗತ್ತನ್ನೇ ಕುಳಿತು ವೀಕ್ಷಿಸುತ್ತಿದ್ದೇನೆ ಅಂದ ಹಾಗೆ, ಅಂಬೆಗಾಲು ಇಡಲು ಶುರುಮಾಡಿದಾಗ ನಾನು ಎಲ್ಲಿದ್ದೀನಿ ಹುಡುಕಮ್ಮ ಎಂದ ಹಾಗೆ, ತೊದಲು ನುಡಿಗಳಲ್ಲಿ ಮೊದಲ ಬಾರಿ ಅಮ್ಮಾ ಎಂದು ಕರೆದಾಗ ಇಡಿಯ ಪ್ರಪಂಚವೇ ನನ್ನ ಕರೆಗೆ ಓಗೊಟ್ಟಿದೇಯೇನೋ ಎಂಬಂತೆ ನಾನು ಸ್ಪಂದಿಸಿದ್ದು , ಮಗಳು ನಿಲ್ಲಲು ಪ್ರಾರಂಭಿಸಿ ನೋಡಿ ಹೇಗೆ ನಾನು ನನ್ನ ಕಾಲ ಮೇಲೆ ನಿಂತಿದ್ದೇನೆ ಎಂದು ಆತ್ಮವಿಶ್ವಾಸದ ನಗೆ ಬೀರಿದ ಹಾಗೆ. ನಡೆಯಲು ಶುರು ಮಾಡಿದಾಗ ನನ್ನನ್ನು ಹಿಡಿಯುವರೇ ಈ ಪ್ರಪಂಚದಲ್ಲಿ ಇಲ್ಲವೇನೋ ಎಂಬಂತೆ ಗೆದ್ದು ಬೀಗಿದ ರೀತಿಯನ್ನು ನಾನು ಮರೆಯಲಾಗದು. ಅವಳ ಪ್ರತಿಯೊಂದು ಹಂತದ ಬೆಳವಣಿಗೆಯಲ್ಲೂ ನಾನು ನನ್ನ ತಾಯ್ತನವನ್ನು ಸಂಭ್ರಮಿಸಿದ ರೀತಿ ಹೇಳತೀರದು.

ನನ್ನ ಚೊಚ್ಚಲ ಬಾಣಂತನದ ವೇಳೆ, ನನ್ನ ತವರಿನಲ್ಲಿ ಅಡಿಕೆ ಕೊಯಿಲಿನ ಸಮಯ, ಅಮ್ಮನಿಗೆ ಅಡಿಕೆ ಸುಲಿಯಲು ಬರುವ ಕೆಲಸದವರಿಗೆಲ್ಲಾ ತಿಂಡಿ, ಪಾನೀಯಗಳನ್ನು ಒದಗಿಸಿ , ಎರಡೆರಡು ಕೊಟ್ಟಿಗೆಯ ಜಾನುವಾರುಗಳನ್ನು ಸಂಭಾಳಿಸುತ್ತಾ ಜೊತೆಗೆ ದೈನಂದಿನ ಮನೆಯ ಕೆಲಸ ಕಾರ್ಯಗಳ ಒತ್ತಡವಿದ್ದರೂ ನನ್ನ ಮಗಳ ಅಳುವ ಕರೆಗೆ ಓಗೊಟ್ಟು ರಾತ್ರಿಯಲ್ಲಿ ಅವಳನ್ನು ಅಂಗಾಲ ಮೇಲೆ ಮಲಗಿಸಿಕೊಂಡು ಸಮಾಧಾನಿಸುತ್ತಿದ್ದ ಪರಿ , ತಾಯ್ತನದ ತಾಳ್ಮೆಯನ್ನು ಕಂಡು ಅಚ್ಚರಿಪಟ್ಟಿದ್ದಿದೆ.

ಅದರಂತೆ ನನ್ನ ಎರಡನೇ ಮಗಳಿಗೆ ಮೊದಲ ಮಗಳು ಅಕ್ಕನಾಗಿ, ತಾಯಿಯಂತೆ ಊಟ ತಿಂಡಿ ಮಾಡಿಸುವಾಗ, ಸ್ನಾನ ಮಾಡಿಸಿ, ತಲೆ ಬಾಚಿ, ಹಣೆಗಿಟ್ಟು ಶೃಂಗಾರ ಮಾಡಿ ಖುಷಿ ಪಡುವ, ಚಿಕ್ಕ ಮಗಳು ಅತ್ತಾಗ ದೊಡ್ಡವಳು ಸಮಾಧಾನ ಹೇಳುವ ಪರಿ ಕಂಡು ಹೆಣ್ಣಿಗೆ ತಾಯ್ತನ ಎಷ್ಟು ಸಹಜವಾಗಿಯೇ ಮೈಗೂಡುತ್ತದೆಯಲ್ಲವೇ ಎಂಬ ಅರಿವು ಆಗಿದೆ. ಅಮ್ಮ ಹೇಳುತ್ತಿದ್ದ ಕಿವಿ ಮಾತಿನಂತೆ ಮಗುವೊಂದು ಜನಿಸಿದಾಗ ತಾಯಿಯೂ ತಾನಾಗೆ ಜನಿಸುತ್ತಾಳೆ ಎಂಬ ಮಾತು ಎಷ್ಟು ನಿಜ ಎಂದೆನಿಸಿದೆ.

ಒಟ್ಟಿನಲ್ಲಿ ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತು ಅವರ ಬಾಲ್ಯದ ಆಟ ಪಾಠಗಳನ್ನು ಕಾಣುತ್ತಾ ಅವರು ಸ್ವತಂತ್ರವಾಗಿ ಶಾಲೆಗೆ ಹೋಗತೊಡಗಿದ ಮೇಲೆ ಕಂಡ ಈ ಹಿನ್ನೋಟ ನೋಡಿ ನನಗೆ ಅನಿಸಿದ್ದು ಹೀಗೆ. ಈ ಎರಡು ಮಕ್ಕಳ ತಾಯ್ತನದ ಅನುಭವ ಬೇರೆ ಆದರೂ ಭಾವ ಒಂದೇ ......

**– ಚೇತನ ಭಾರ್ಗವ, ಬೆಂಗಳೂರು.**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಹುಸೇನ್ ಕೈಯಲ್ಲಿ ಹಸನಾದ ಉಗ್ರನರಸಿಂಹ

ವಿಜಯನಗರ ಸಾಮ್ರಾಜ್ಯದ ಅರಸರ ಕಾಲದಲ್ಲಿ ಹಂಪಿಯ ಶಿಲ್ಪಕಲಾ ಸೃಷ್ಟಿ, ಆಕರ್ಷಣೀಯ, ವೈವಿಧ್ಯಮಯ ಹಾಗೂ ಅದ್ಭುತವಾಗಿದೆ ಹಂಪಿ ಎಂದಾಕ್ಷಣ ವಿಜಯನಗರ ಸಾಮ್ರಾಜ್ಯದ ಗತವೈಭವ ನೆನಪಾದರೆ ಮತ್ತೊಂದು ಕಡೆ ಹಂಪಿಯ ಶಿಲ್ಪಕಲಾ ಸೌಂದರ್ಯದ ಸಂಗೀತ ಹೊರಹೊಮ್ಮುವ ವಿಜಯ ವಿಠ್ಠಲ ದೇವಸ್ಥಾನ, ಕಲ್ಲಿನ ತೇರು ಕಮಲ್ ಮಹಲ್ ಹಾಗೂ ಏಕಶೀಲೆಯ ಬೃಹತ್ ಶಿಲ್ಪ ಉಗ್ರ ನರಸಿಂಹ ಕಣ್ಣೆದುರು ನಿಲ್ಲುತ್ತವೆ.


ವಿಜಯನಗರದ ಭಗ್ನಾವಶೇಷಗಳಲ್ಲೇ ಅತ್ಯಂತ ವಿಶಿಷ್ಟವಾಗಿ ಆಕರ್ಷಿಸುತ್ತದೆ ಉಗ್ರ ನರಸಿಂಹನ ಬೃಹತ್ತಾದ ಶಿಲ್ಪ. ಇದು ಈಗ ನೋಡಲು ಸುಂದರವಾಗಿ ಕಾಣುತ್ತದೆ. ಆದರೆ ಇದು ಹಂಪಿಯಲ್ಲಿ ಉತ್ಖನನ, ಪುನರಜ್ಜೀವನ, ನವೀಕರಣ ಕಾರ್ಯಗಳು ಪ್ರಾರಂಭವಾಗುವ ಪೂರ್ವದಲ್ಲಿ ಸಿಂಹ ಶಿಖರವುಳ್ಳ ಪ್ರಭಾವಳಿಯ ಮಧ್ಯ ಕುಳಿತಿರುವ ಈ ಉಗ್ರ ಮೂರ್ತಿಯ ಎಡತೊಡೆಯ ಮೇಲೆ ಕುಳಿತಿದ್ದ ಲಕ್ಷ್ಮಿ ದೇವಿಯ ಮೂರ್ತಿಯನ್ನು ತುಂಡರಿಸಿ ಬಿಸಾಡಿದ್ದಾರೆ ಹಾಗೂ ಉಗ್ರ ನರಸಿಂಹನ ಕೈ ಕಾಲುಗಳು ಎದೆ ಬಾಯಿ ತುಂಡರಿಸಿದ್ದಾರೆ ಹೀಗಾಗಿ ಇದು ವಿರೂಪ ಗೊಂಡು ಉಗ್ರವಾಗಿ ಕಾಣಿಸುತ್ತಿತ್ತು. ಹೀಗಾಗಿಯೇ ಜನಸಾಮಾನ್ಯರ ದೃಷ್ಟಿಯಲ್ಲಿ ಲಕ್ಷ್ಮೀನರಸಿಂಹ ಉಗ್ರನರಸಿಂಹನಾದ. ಆದರೆ 80ರ ದಶಕದಲ್ಲಿ ಕೈಗೊಂಡ ಪುನರಜ್ಜೀವನ ಕಾರ್ಯದಲ್ಲಿ ಇದು ಉಗ್ರ ರೂಪದ ಬದಲಾಗಿ ಸ್ವಲ್ಪ ಪರಿವರ್ತನೆಯಾಗಿ ಕೈ ಕಾಲುಗಳು ಎದೆ ಬಾಯಿ ನವೀಕರಣಗೊಂಡು ಈಗ ನೋಡುಗರಿಗೆ ಇದು ಸುಂದರವಾಗಿ ಕಾಣಿಸುತ್ತಿದೆ. ನವೀಕರಣದ ಕಾರ್ಯ ಮೂರು ಹಂತದಲ್ಲಿ ನಡೆದಿತ್ತು. ಈ ಕಾರ್ಯದಲ್ಲಿ ಹಾಗೂ ಉತ್ಖನನದಲ್ಲಿ ಪಾಲ್ಗೊಂಡಿದ್ದ ಹಂಪಿಯ ಡಿ.ಹುಸೇನ್ ಇವರ ಕುರಿತ ಪರಿಚಯ. ಹಂಪಿಯಲ್ಲಿ ಉತ್ಖನನ, ಪುನರುಜ್ಜೀವನ, ನವೀಕರಣ ಕಾರ್ಯಗಳ ಪ್ರಾರಂಭಗೊಂಡಿದ್ದು ಸುಮಾರು 1976ರಲ್ಲಿ. ಈ ಯೋಜನೆಯ ಪ್ರಕಾರ ಆಯ್ದ ಸ್ಥಳಗಳಲ್ಲಿ ಅಳಿದುಳಿದ ಪುರಾತತ್ವ, ಸಾಂಸ್ಕೃತಿಕ ವಸ್ತುಗಳನ್ನು ಗುರುತಿಸಿ ದಾಖಲಿಸುವುದು, ಭಗ್ನಾವಶೇಷಗಳ ಪುನರುಜ್ಜೀವನ, ಜೀರ್ಣೋದ್ಧಾರ ಮತ್ತು ನವೀಕರಣ ಮೊದಲಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದಾಗಿತ್ತು. ಆ ಪ್ರಕಾರ ಭಾರತೀಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯ ಹಂಪಿಯ ಉತ್ಖನನ ಹಾಗೂ ಜೀರ್ಣೋದ್ದಾರ ಕೈಗೊಂಡಿತ್ತು. ಈ ಕಾರ್ಯದಲ್ಲಿ ಪುರಾತತ್ವ ತಜ್ಞರು, ಸಂಶೋಧಕರು ಪಾಲ್ಗೊಂಡಿದ್ದರು. ಈ ತಜ್ಞರು ಸಂಶೋಧಕರ ಜೊತೆಗೆ ಸುಮಾರು 10 ವರ್ಷಗಳ ಕಾಲ ಉತ್ಖನನ ಹಾಗೂ ಪುನರುಜ್ಜೀವನ ಕಾರ್ಯದಲ್ಲಿ ಪಾಲ್ಗೊಂಡ ಶ್ರೇಯಸ್ಸು ಹುಸೇನ ಇವರಿಗೆ ಸಲ್ಲುತ್ತದೆ. ಹಂಪಿಯ ಪ್ರದೇಶವು ಭಾರತೀಯ ಪ್ರಾಚ್ಯವಸ್ತು ಇಲಾಖೆ ದೆಹಲಿ ಹಾಗೂ ರಾಜ್ಯ ಪುರಾತತ್ವ ಇಲಾಖೆ ಹಾಗೂ ವಸ್ತುಸಂಗ್ರಹ ಇಲಾಖೆ ಅಡಿಯಲ್ಲಿ ಬರುತ್ತದೆ. ಈ ಎರಡು ಇಲಾಖೆಗಳು ಉತ್ಖನನ ಹಾಗೂ ಸಂರಕ್ಷಣೆ ಕಾರ್ಯವನ್ನು ನಿರ್ವಹಿಸುತ್ತಿವೆ. ಭಾರತೀಯ ಪುರಾತತ್ವ ಇಲಾಖೆ ಕೈಗೊಂಡ ಕಾರ್ಯದಲ್ಲಿ 1985ರಿಂದ 86ರವರೆಗೆ ಬ್ರಹ್ಮಯ್ಯ 1987–91ರಲ್ಲಿ ಪದ್ಮನಾಭ 1991–92 ರಲ್ಲಿ ಎಸ್.ಎಂ. ಜಾನ್ ಇವರ ನೇತೃತ್ವದ ಹಾಗೂ ಮಾರ್ಗದರ್ಶನದ ತಂಡದಲ್ಲಿ ಹುಸೇನ್ ಇವರು ಪಾಲ್ಗೊಂಡಿದ್ದರು. ಡಾ. ಬಿ ನರಸಿಂಹಯ್ಯ ಇವರು ಸಾರಥ್ಯದಲ್ಲಿ ಮಹಾನವಮಿ ದಿಬ್ಬ, ಹಜಾರ ರಾಮ ದೇವಾಲಯ ಬಜಾರ, ಕೃಷ್ಣದೇವರಾಯ ಅರಮನೆ ಅವರಣ ಮೊದಲಾದ ಸ್ಥಳಗಳಲ್ಲಿ ಉತ್ಖನನವನ್ನ ನಿರ್ವಹಿಸಲಾಗಿತ್ತು. ಈ ಪ್ರದೇಶದಲ್ಲಿ ಬಹು ಮುಖ್ಯವಾಗಿ ಮಹಾನವ ದಿಬ್ಬದ ಪಕ್ಕದಲ್ಲಿ ಉತ್ಖನನ ಮಾಡಿದಾಗ ಸುಂದರವಾದ ಒಂದು ಪುಷ್ಕರಣೆ ಪತ್ತೆ ಮಾಡಲಾಯಿತು. ಇದು ಬಹು ಸುಂದರವಾಗಿದ್ದ ಜನರನ್ನು ಆಕರ್ಷಿಸುತ್ತಿದೆ. ಹಾಗೇನೆ ಈ ಪ್ರದೇಶಗಳಲ್ಲಿ ಸಣ್ಣ ಸಣ್ಣ ವಸ್ತುಗಳಿಂದ ಹಿಡಿದು ಶಿಲ್ಪಗಳವರೆಗೂ ಪರಿಶೋಧಿಸಿದಾಗ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಪುರಾತತ್ವ ವಸ್ತುಗಳನ್ನು ಗುರುತಿಸಿ ದಾಖಲಿಸಿರುವುದು ಹುಸೇನ್ ಇವರ ಅತ್ಯಂತ ಮಹತ್ವದ ಕಾರ್ಯವಾಗಿದೆ. ಹೀಗೆ ಶೋಧಿಸಿದ ಪುರಾತತ್ವ ವಸ್ತುಗಳನ್ನು ಕಮಲ್ ಮಹಾಲ್ ಆವರಣದ ಖಜನಾ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿ ಜನರಿಗೆ ವೀಕ್ಷಿಸಲು ಇಡಲಾಗಿದೆ. ಇಲ್ಲಿರುವ ಬಹುತೇಕ ಪುರಾತತ್ವ ವಸ್ತುಗಳನ್ನು ಹುಸೇನ್ ಅವರ ಶ್ರದ್ಧೆ, ಶ್ರಮ ಹಾಗೂ ಹಗಲು ರಾತ್ರಿಯೆನ್ನದೆ ಮಂಟಪ, ಟೆಂಟ್‌ಗಳಲ್ಲಿ ಇದ್ದು ಪ್ರಮಾಣಿಕ ಕಾರ್ಯದಿಂದ ಇವುಗಳನ್ನು ಪತ್ತೆಹಚ್ಚಲಾಗಿದೆ ಎನ್ನುವುದು ಗಮನಾರ್ಹ ಸಂಗತಿಯಾಗಿದೆ.




**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ:** 9449654489

Hampi Times E-paper
SCAN AND READ






ಹಂಪಿಯ ಉತ್ಖನನ, ಸಂರಕ್ಷಣೆಯ ಕಾರ್ಯದಲ್ಲಿ ಹತ್ತು ವರ್ಷಗಳ ಕಾಲದ ನಿರ್ವಹಣೆಯಲ್ಲಿ ನೆಲವನ್ನು ಅಗೆದು ಮಣ್ಣನ್ನು ಜರಡಿ ಹಿಡಿದಾಗ ದೊರೆತ ಚಿಕ್ಕ ಚಿಕ್ಕ ವಸ್ತುಗಳಿಂದ ಆಳೆತ್ತರದ ವಿಗ್ರಹಗಳು ವರೆಗೆ ಸುಮಾರು ಹತ್ತು ಸಾವಿರ ಸಂಖ್ಯೆಯಷ್ಟು ವಸ್ತುಗಳನ್ನು ದಾಖಲಿಸಿದ ದಾಖಲೆ ಹುಸೇನವರದ್ದು. ಹಂಪಿಯ ಉತ್ಖನನ, ಇಷ್ಟೆಲ್ಲ ಅನುಭವಿ ಭಗ್ನ ಬೃಹತ್ ಶಿಲ್ಪ ಉಗ್ರನರಸಿಂಹನ ಪುನರುಜ್ಜೀವನ ಕಾರ್ಯದಲ್ಲಿ ಅಷ್ಟೇ ಅಲ್ಲ, ನಂಜನಗೂಡು, ಬೇಲೂರು, ಶ್ರೀರಂಗಪಟ್ಟಣದ ಗೋಪುರಗಳ ನವೀಕರಣ ಕಾರ್ಯದಲ್ಲೂ ಪಾಲ್ಗೊಂಡಿದ್ದ ಹೆಗ್ಗಳಿಕೆ ಡಿ.ಹುಸೇನ್ ಇವರಿಗೆ ಸಲ್ಲುತ್ತದೆ. ಗುಡಿ ಗೋಪುರಗಳ ಶಿಲ್ಪ, ವಾಸ್ತು, ವಾಸ್ತುಶಿಲ್ಪದ ಬಗ್ಗೆ ಅರಿತಿರುವವ. ಮತ ಮಂದಿರಗಳ ಬಗ್ಗೆ ಭಕ್ತಿ, ಗೌರವ ಹೊಂದಿರುವ ವ್ಯಕ್ತಿತ್ವ. ಗಾರೆ ಶಿಲ್ಪಗಳನ್ನು, ಟೆರಿಕೋಟ ಹಾಗೂ ಸಿಮೆಂಟ್‌ನಲ್ಲಿ ಶಿಲ್ಪಗಳನ್ನು ನಿರ್ಮಿಸುವಲ್ಲಿಯೂ ಪ್ರಾವೀಣ್ಯ ಹೊಂದಿದ್ದಾರೆ. ಮೈಸೂರು ದಸರಾದಲ್ಲಿ ಹಂಪಿಯ ಸ್ಮಾರಕಗಳ ಹಾಗೂ ಹಂಪಿ ಉತ್ಸವಗಳಲ್ಲಿ ಟ್ಯಾಬ್ಲೋಗಳನ್ನು ನಿರ್ಮಿಸಿ ಜನ ಮೆಚ್ಚಿಗೆ ಪಡೆದವರು. ಕನ್ನಡ ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಹುಸೇನ್ ಇವರು ವಿಶ್ವವಿದ್ಯಾಲಯದ ಎಲ್ಲ ಕಾರ್ಯಕ್ರಮಗಳ ವೇದಿಕೆ ನಿರ್ಮಾಣ, ಅಲಂಕಾರ ನುಡಿ ಹಬ್ಬಗಳ ಕಾರ್ಯಕ್ರಮ ಮೊದಲಾದವುಗಳನ್ನು ಏಕವ್ಯಕ್ತಿಯಾಗಿ ನಿರ್ವಹಿಸುತ್ತಾ ಬಂದಿದ್ದಾರೆ. ಆವರಣದ ಶಿಲ್ಪಗಳ ನಿರ್ಮಾಣ, ಶಿಲ್ಪವನ ನಿರ್ಮಾಣದಲ್ಲಿಯು ಇವರದ್ದು ಪ್ರಮುಖ ಸ್ಥಾನವಿದೆ. ಹಂಪಿಯ ಉತ್ಕನನ, ಸಂರಕ್ಷಣೆ ಕಾರ್ಯ ಹಾಗೂ ಇವರ ಶಿಲ್ಪ ಕಾರ್ಯಗಳಿಗಾಗಿ ಸರ್ಕಾರ ಕೊಡಮಾಡುವ 2020–21ನೇ ಸಾಲಿನ ಅಮರಶಿಲ್ಪಿ ಜಕಣಾಚಾರಿ ಪ್ರಶಸ್ತಿಗೆ ಭಾಜನರಾಗಿದ್ದಾರೆ ಹುಸೇನ್. ಹಂಪಿಯ ಉತ್ಖನನ ಹಾಗೂ ಸಂರಕ್ಷಣ ಕಾರ್ಯದಲ್ಲಿ ಅನುಭವಿ ತಜ್ಞರೊಂದಿಗೆ ಕಾರ್ಯನಿರ್ವಹಿಸಿ ಅಪಾರವಾದ ಅನುಭವವನ್ನು ಹೊಂದಿದವ ರಾಗಿದ್ದಾರೆ ಹೀಗಾಗಿ ಹಂಪಿಯ ಸ್ಮಾರಕಗಳ ಬಗ್ಗೆ ಸಂರಕ್ಷಣೆಯ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದಾರೆ. ನಿಧಿಯ ಆಸೆಗಾಗಿ ಹಂಪಿಯನ್ನು ಹಾಳು ಮಾಡುವವರು ಬಗ್ಗೆ ಅಪಾರವಾದ ಆಕ್ರೋಶ ಇದೆ. ಎಷ್ಟೆಲ್ಲಾ ಅನುಭವ ಜ್ಞಾನ ಹೊಂದಿದ್ದರು ಯಾವುದೇ ಹಮ್ಮಬಿಮ್ಮುಗಳಿಲ್ಲದೆ ಹಂಪಿಯ ಬಗ್ಗೆ ಏನು ಗೊತ್ತಿಲ್ಲದ ಹಾಗೆ ಇನ್ನು ಹಂಪಿಯ ಬಗ್ಗೆ ತಿಳಿಯುವ ಕುತೂಹಲ ಆಸಕ್ತಿಯನ್ನು ಇಟ್ಟುಕೊಂಡಿರುವ ಸರಳ ನಿಷ್ಕಲ್ಮಶ ವ್ಯಕ್ತಿತ್ವದ ಅಪರೂಪದ ಜ್ಯಾತ್ಯಾತೀತ ಮನಸ್ಸಿನ ಹುಸೇನ್.



## ಉಗ್ರ ನರಸಿಂಹನ ನವೀಕರಣದಲ್ಲಿ ಹುಸೇನ್

ಭಾರತೀಯ ಪುರಾತತ್ವ ಇಲಾಖೆಯ ನಿರ್ದೇಶನದಲ್ಲಿ ಉಗ್ರ ನರಸಿಂಹನ ವಿಗ್ರಹದ ಪುನರುಜ್ಜೀವನನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿತ್ತು. ಸುಮಾರು ಆರರಿಂದ ಏಳು ಮೀಟರ್ ಎತ್ತರವಿರುವ ಏಕಶಿಲೆಯ ಈ ಬೃಹತ್ ವಿಗ್ರಹದ ಕೈ ಕಾಲು ಮೊದಲಾದ ಭಾಗಗಳು ತುಂಡು ತುಂಡಾಗಿ ಭಗ್ನಗೊಳಿಸಲಾಗಿತ್ತು ಇದನ್ನು ಪುನರ್ ಜೋಡಿಸಿ ಸುಂದರವಾದ ವಿಗ್ರಹವನ್ನು ಮಾಡಲು ಇಲಾಖೆಯ ಕಾಳಜಿ ವಹಿಸಿ ಬ್ರಹ್ಮಯ್ಯ ಇವರ ನೇತೃತ್ವದಲ್ಲಿ ಈ ಕಾರ್ಯ ಪ್ರಾರಂಭಗೊಂಡಿತ್ತು. ಇವರ ನಂತರ ಪದ್ಮನಾಭ ಇವರು ನವೀಕರಣ ಕಾರ್ಯ ಮುಂದುವರಿಯಿತು. ಇವರು ಕಾಲು, ಕೈ, ಯೋಗ ಪಟ್ಟಿಯನ್ನು ಹಾಕಿ ಸಿದ್ದಮಾಡುತ್ತಿದ್ದರು. ಇವರ ಈ ನವೀಕರಣ ಕಾರ್ಯ ನಡೆಯುವ ಸಂದರ್ಭದಲ್ಲಿ ಹಂಪಿಗೆ ಭೇಟಿ ನೀಡಿದ್ದ ಖ್ಯಾತ ಸಾಹಿತಿಗಳು ಜ್ಞಾನಪೀಠ ಪ್ರಶಸ್ತಿ ಪಡೆದ ಡಾ.ಶಿವರಾಮ ಕಾರಂತ ಇವರು ಉಗ್ರ ನರಸಿಂಹನ ರಿಪೇರಿ ಕಾರ್ಯವನ್ನು ಕಂಡು, ಕಾರ್ಯವು ವಿಗ್ರಹದ ಮೂಲ ಶಿಲ್ಪಶೈಲಿ ಸ್ವರೂಪ ಸೌಂದರ್ಯಕ್ಕೆ ಪೂರಕವಾಗಿಲ್ಲವೆಂದು ಅಭಿಪ್ರಾಯಪಟ್ಟು, ತಕರಾರು ಎತ್ತಿ ಕೇಂದ್ರ ಪುರಾತತ್ವ ಇಲಾಖೆಗೆ ಕಾರ್ಯವನ್ನು ನಿಲ್ಲಿಸುವಂತೆ ಪತ್ರ ಬರೆದು ನವೀಕರಣ ಕಾರ್ಯವನ್ನು ತಡೆಹಿಡಿದಿದ್ದರು. ಇದರಿಂದ ಕಾರ್ಯ ಪೂರ್ಣ ಗೊಳ್ಳಲಿಲ್ಲ. ಮತ್ತೆ 1991– 92 ರಲ್ಲಿ ಪುರಾತತ್ವ ತಜ್ಞರಾದ ಎಸ್.ಎಂ.ಜಾನ್ ನೇತೃತ್ವದಲ್ಲಿ ವಿಗ್ರಹದ ಭಗ್ನಾ ಅವಶೇಷಗಳನ್ನು ವಿಶೇಷವಾಗಿ ಎದೆ ಭಾಗವನ್ನು ಸರಿಪಡಿಸುವ ಕಾರ್ಯ ನಡೆಯಿತು. ಈ ಮೂರು ಜನರ ಮಾರ್ಗದರ್ಶನದಲ್ಲಿ ನಡೆದ ಉಗ್ರ ನರಸಿಂಹನ ಪುನರುಜ್ಜೀವನ ಕಾರ್ಯದಲ್ಲಿ ಹುಸೇನ್ ಇವರು ಸಹಾಯಕರಾಗಿ ಪೂರ್ಣ ಪ್ರಮಾಣದಲ್ಲಿ ಪಾಲ್ಗೊಂಡು, ಉಗ್ರ ನರಸಿಂಹನ ಎದೆ, ಬಾಯಿ ಭಾಗ, ತುಂಡರಿಸಿದ ಕೈ ಕಾಲು ಸರಿಪಡಿಸಿ ಒಟ್ಟಾರೆ ಭಗ್ನಗೊಂಡ ನರಸಿಂಹ ವಿಗ್ರಹದ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಮಹತ್ತರವಾದ ಕಾರ್ಯ ನಿರ್ವಹಿಸಿದ್ದಾರೆ.









# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
60,000
HAMPI TIMES E-PAPER READES
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:01 Volume:01 • ಸಂಚಿಕೆ:312 Issue:312 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 12.05.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



TAFE
ವಿಜಯಶ್ರೀ ಮೋಟಾರ್ಸ್
(ಟ್ರ್ಯಾಕ್ಟರ್ ವಿಭಾಗ)
RRR GROUP
99801 27607
73533 06719

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

www.hampitimes.com


# ದುಂದುವೆಚ್ಚದ ಮದುವೆಗಳು ನಿಲ್ಲಲಿ

## ಸಾಮೂಹಿಕ ವಿವಾಹಗಳಲ್ಲಿ ಶ್ರೀಗಳ ಆಶೀರ್ವಾದ, ಭಗವಂತನ ಕೃಪೆ ಇರಲಿದೆ : ಉಜ್ಜಿನಿ ಶ್ರೀಗಳು

**ಹಂಪಿ ಟೈಮ್ಸ್ ಕೊಟ್ಟೂರು**

ಬಡವರು ಮಾತ್ರ ಸಾಮೂಹಿಕ ವಿವಾಹದಲ್ಲಿ ಮದುವೆ ಮಾಡಿಕೊಳ್ಳುತ್ತಾರೆ ಎಂಬುದು ತಪ್ಪು ಅಭಿಪ್ರಾಯ. ಎಲ್ಲರೂ ಸಮಾನರು ಎಂಬುದರ ಸಂಕೇತವಿದು. ಇಲ್ಲಿನ ನವ ಜೋಡಿಗಳಿಗೆ ಸರ್ವರ ಆಶೀರ್ವಾದ ಮತ್ತು ಭಗವಂತನ ಕೃಪೆ ಇರುತ್ತದೆ ಎಂದು ಉಜ್ಜಿನಿ ಶ್ರೀ ಸದ್ಧರ್ಮ ಪೀಠದ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಚಾನುಕೋಟಿ ಮಠದಲ್ಲಿ ಬಸವ ಜಯಂತಿ ಹಾಗೂ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ ನಿಮಿತ್ತ ಶುಕ್ರವಾರ ಏರ್ಪಡಿಸಿದ್ದ ಸಾಮೂಹಿಕ ವಿವಾಹಗಳು ಹಾಗೂ ಶಿವ ದೀಕ್ಷೆ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ದುಂದು ವೆಚ್ಚದ ಮದುವೆಗಳಿಗೆ ಕಡಿವಾಣ ಹಾಕಿ ಮಠ ಮಾನ್ಯಗಳಲ್ಲಿ ಸ್ವಾಮೀಜಿಗಳ ಆಶೀರ್ವಾದದಲ್ಲಿ ಮದುವೆ ಆದರೆ ದಾಂಪತ್ಯ ಬದುಕಿಗೆ ಸಂಸ್ಕಾರ, ಉತ್ತಮ ಮೌಲ್ಯಗಳ ಆಶೀರ್ವಚನ ಹಾಗೂ ಆರ್ಥಿಕ ಸದೃಢತೆ ನಿರ್ಮಾಣ ಮಾಡುತ್ತೆ ಎಂದರು.



ಕಳೆದ ಮೂರು ದಶಕಗಳಿಂದ ಡೋಣೂರು ಚಾನುಕೋಟಿ ಮಠವು ಸಾಮಾಜಿಕ ಪರಿವರ್ತನೆ, ಸಾಮೂಹಿಕ ವಿವಾಹ, ಶಿವ ದೀಕ್ಷೆ ಹಾಗೂ ಆರೋಗ್ಯ ತಪಾಸಣೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ಹಮ್ಮಿಕೊಂಡು ಬಂದಿರುವುದು ಶ್ಲಾಘನೀಯ ಎಂದರು.

ಡೋಣೂರ ಚಾನುಕೋಟಿ ಮಠದ ಸಿದ್ಧಲಿಂಗ ಶಿವಾಚಾರ್ಯರು ಪ್ರಾಸ್ತಾವಿಕ ನುಡಿಗಳಲ್ಲಿ, ಕಳೆದ ಒಂದು ವಾರದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಧಾರ್ಮಿಕ ಪ್ರವಚನಗಳು ನಡೆದಿದ್ದು ಇಂದು ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ರಥೋತ್ಸವ ಹಾಗೂ 9 ಜೋಡಿಗಳ ವಿವಾಹ ಹಾಗೂ 40 ವಟುಗಳಿಗೆ ಶಿವ ದೀಕ್ಷೆ ಕಾರ್ಯಕ್ರಮಗಳು ಶ್ರೀ ಮಠದಿಂದ ಜರುಗಿದೆ ಎಂದು ತಿಳಿಸಿದರು.

ಬೆಂಗಳೂರಿನ ವಿಭೂತಿ ಮಠದ ಮಹಾಂತ ಶಿವಾಚಾರ್ಯರು, ಕೂಡ್ಲಿಗಿ ಹಿರೇ ಮಠದ ಪ್ರಶಾಂತ ಸಾಗರ ಶಿವಾಚಾರ್ಯರು, ನಂದಿಪುರದ ಶ್ರೀಗಳು, ಚಾಪಿ ಚಂದ್ರಪ್ಪ, ಕರಡಿ ಕೊಟ್ರಯ್ಯ, ಅಡಕಿ ಮಂಜುನಾಥ, ಭಕ್ತಾದಿಗಳು ಇದ್ದರು.



> ಸಾಮೂಹಿಕ ವಿವಾಹಗಳಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡುವ ಮೂಲಕ ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕು. ಲಕ್ಷಾಂತರ ರೂ. ಸಾಲದ ಮದುವೆಗಳು ಸಂಭ್ರಮಕ್ಕಿಂತ ಚಿಂತೆಯನ್ನು ತಂದೊಡ್ಡುತ್ತವೆ.
> – ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು
> ಉಜ್ಜಿನಿ ಶ್ರೀ ಸದ್ಧರ್ಮ ಪೀಠ.

# ಜೆಸ್ಕಾಂ ನಿರ್ಲಕ್ಷ್ಯ ವಿದ್ಯುತ್ ತಗುಲಿ ಹಸು ಸಾವು

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಎಂ.ಬಿ ಅಯ್ಯನಹಳ್ಳಿ ಬೆಳ್ಳೆಕಟ್ಟೆ ರಸ್ತೆಯಲ್ಲಿ ಶನಿವಾರ ವಿದ್ಯುತ್ ತಗುಲಿ ಹಸುವೊಂದು ಮೃತಪಟ್ಟಿದೆ.

ಎಂ.ಬಿ ಅಯ್ಯನಹಳ್ಳಿಯ ಗೊಲ್ಲರಹಟ್ಟಿಯ ರೈತ ಗೋವರ್ಧನ್ ಅವರಿಗೆ ಸೇರಿದ ಹಸುವಾಗಿದ್ದು, ಮನೆಯಿಂದ ಮೇಯಲು ಹೋಗುತ್ತಿದ್ದ ಸಂದರ್ಭದಲ್ಲಿ ರಸ್ತೆಯ ಪಕ್ಕದಲ್ಲಿ ಇದ್ದ ಟ್ರಾನ್ಸ್ ಫಾರ್ಮ್ ವಿದ್ಯುತ್ ತಗುಲಿದೆ. 25,000 ರೂ ಬೆಲೆಯ ಹಸು ಮೃತಪಟ್ಟಿರುವುದರಿಂದ ನಷ್ಟವಾಗಿದೆ. ಜೆಸ್ಕಾಂ ವಿದ್ಯುತ್ ಪರಿವರ್ತಕ ಸುತ್ತ ಬೇಲಿ ಅಳವಡಿಸದ ಕಾರಣ ವಿದ್ಯುತ್ ತಗುಲಿದೆ. ರಸ್ತೆಯ ಪಕ್ಕದಲ್ಲಿ ವಿದ್ಯುತ್ ಟ್ರಾನ್ಸ್ ಫಾರ್ಮ್ ಇರುವುದರಿಂದ ಇಲ್ಲಿನ ಎಂಬಿ ಅಯ್ಯನಹಳ್ಳಿ ಗೊಲ್ಲರಹಟ್ಟಿಯ ಸಾರ್ವಜನಿಕರು, ಮಹಿಳೆಯರು, ವೃದ್ಧಿಯರು, ವಿದ್ಯಾರ್ಥಿಗಳು, ವಾಹನ ಸವಾರರು, ರೈತರು ಸೇರಿದಂತೆ ಇತರರು ಈ ರಸ್ತೆಯಲ್ಲಿ ಓಡಾಡುತ್ತಿದ್ದು, ಕಳೆದ ಮೂರು–ನಾಲ್ಕು ದಿನಗಳಿಂದ ಅಲ್ಪಸ್ವಲ್ಪ ಪ್ರಮಾಣದ ಮಳೆ ಸುರಿಯುತ್ತಿದ್ದು, ಸುತ್ತಲು ನೆಂದಿರುವ ಕಾರಣ ಮೂರು ದಿನಗಳಿಂದ ಗ್ರೌಂಡ್ ಆಗಿದೆ. ಈ ಬಗ್ಗೆ ಸ್ಥಳೀಯ ಚಿಕ್ಕಜೋಗಿಹಳ್ಳಿ ಜೆಸ್ಕಾಂ >> 4



# ಜಿಲ್ಲೆಗೆ ಪ್ರಥಮ ಹಗರಿಬೊಮ್ಮನಹಳ್ಳಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ.80.42



ಆರ್.ಎನ್.ಸಾತ್ವಿಕ್ (ಶೇ.98.56)



ಎಸ್.ಎಚ್.ಚಂದನಾ (ಶೇ. 97.92)



ಭಾರ್ಗವಿ ಬೇವಿನಮರದ (ಶೇ.97.44)



ಕೆ.ಸುಶೀಲ (ಶೇ.93.28)



ಎಲ್.ದ್ರಾವಿಡ್ ನಾಯ್ಕ್ (ಶೇ.92.32)



ಎಮ್ಮೇರ ಮಲ್ಲಿಕಾರ್ಜುನ (ಶೇ.92.16)

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಗರಿಷ್ಠ ಮಟ್ಟದಲ್ಲಿ ಬರಬೇಕು ಎಂದು ಶತಾಯ ಗತಾಯ ಪ್ರಯತ್ನದ ಹಿನ್ನೆಲೆಯಲ್ಲಿ, ಶೇ.80.42ರಷ್ಟು ತೇರ್ಗಡೆಯ ಫಲಿತಾಂಶಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಆದರೂ ಕಲ್ಯಾಣ ಕರ್ನಾಟಕದ ತಾಲೂಕುಗಳಲ್ಲೇ ಪ್ರಥಮ ಸ್ಥಾನದಲ್ಲಿದ್ದು, ಇತರೆ ತಾಲೂಕುಗಳ ಶಿಕ್ಷಣ ಇಲಾಖೆಗಳ ಹುಬ್ಬೇರಿಸುವಂತೆ ಫಲಿತಾಂಶ ಬಂದಿದ್ದು, ಶ್ರಮಕ್ಕೆ ತಕ್ಕ ಪ್ರತಿಫಲವಾಗಿದೆ ಎನ್ನಲಾಗುತ್ತಿದೆ.

ಈ ವರ್ಷ 2023–24ನೇ ಸಾಲಿನ ಒಟ್ಟು 2,723 ವಿದ್ಯಾರ್ಥಿಗಳಲ್ಲಿ 2,190 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಬಿಇಒ ಮೈಲೇಶ್ ಬೇವೂರು ತಿಳಿಸಿದ್ದಾರೆ.

ಆಂಗ್ಲ ಮಾಧ್ಯಮ ಪ್ರೌಢಶಾಲಾ ವಿಭಾಗದಲ್ಲಿ ಶಾರದಾ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಆರ್.ಎನ್.ಸಾತ್ವಿಕ್ ಶೇ.98.56 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನದಲ್ಲಿದ್ದಾರೆ. ಪ್ರಸಿದ್ಧಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಎಸ್.ಎಚ್.ಚಂದನಾ ಶೇ.97.92 ಅಂಕ ಗಳಿಸಿ ದ್ವಿತೀಯ ಸ್ಥಾನದಲ್ಲಿದ್ದಾರೆ. ಶಾರದಾ ಆಂಗ್ಲ ಮಾಧ್ಯಮ ಶಾಲೆಯ ಭಾರ್ಗವಿ ಬೇವಿನಮರದ ಶೇ.97.44 ತೃತೀಯ ಸ್ಥಾನ ಗಳಿಸಿದ್ದಾರೆ.

ಕನ್ನಡ ಮಾಧ್ಯಮ ಶಾಲಾ ವಿಭಾಗದಲ್ಲಿ ತಾಲೂಕಿನ ಹಂಪಾಪಟ್ಟಣದ ಚಂದ್ರ ಮೌಳೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿನಿ ಕೆ.ಸುಶೀಲ ಶೇ.93.28 ಅಂಕ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನದಲ್ಲಿದ್ದಾರೆ. ತೆಲುಗೋಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಎಲ್.ದ್ರಾವಿಡ್ ನಾಯ್ಕ ಶೇ.92.32 ಅಂಕ ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ರಾಷ್ಟ್ರೋತ್ಥಾನ ಪ್ರೌಢಶಾಲೆಯ ವಿದ್ಯಾರ್ಥಿ ಎಮ್ಮೇರ ಮಲ್ಲಿಕಾರ್ಜುನ ಶೇ.92.16 ಅಂಕ ಗಳಿಸಿ ತೃತೀಯ ಸ್ಥಾನ ಗಳಿಸಿದ್ದಾರೆ ಎಂದು ತಿಳಿಸಿದರು. ಕಲ್ಯಾಣ ಕರ್ನಾಟಕದ ವಿಜಯನಗರ ಜಿಲ್ಲೆಗೆ ಹಗರಿಬೊಮ್ಮನಹಳ್ಳಿ ಪ್ರಥಮ ಸ್ಥಾನ ಪಡೆದಿರುವುದಕ್ಕೆ ಶಾಸಕ ಕೆ.ನೇಮಿರಾಜ್ ನಾಯ್ಕ್, ಕ್ಷೇತ್ರ ಶಿಕ್ಷಣಾಧಿಕಾರಿ, ಶಿಕ್ಷಣ ಇಲಾಖೆಯ ಅಧಿಕಾರಿವರ್ಗದವರು ಮತ್ತು ತಾಲೂಕು ಆಡಳಿತ ವಿದ್ಯಾರ್ಥಿಗಳ ಸಾಧನೆಗೆ ಪ್ರಶಂಸೆ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಎಸ್.ಜಿ.ಎಸ್. ಪ್ರೌಢಶಾಲೆಗೆ ಶೇ.90 ಎಸ್.ಎಸ್.ಎಲ್.ಸಿ. ಫಲಿತಾಂಶ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹರಪನಹಳ್ಳಿಯ ಶ್ರೀ ಸಹ್ಯಾದ್ರಿ ಶಿಕ್ಷಣ ಮತ್ತು ಗ್ರಾಮೀಣ ಪುನಶ್ಚೇತನ ಅಭಿವೃದ್ಧಿ ಸಂಸ್ಥೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಕಡಲುಬಾಳು ಶ್ರೀ ಗುರು ಶಿವಶಾಂತವೀರ ಅನುದಾನಿತ ಪ್ರೌಢಶಾಲೆ 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಶೇ.90 ರಷ್ಟು ಆಗಿದ್ದು. ಅಂಬಿಕ ಗೊರವರ ಶೇಕಡಾ 84 (525/625), ಫಲಿತಾಂಶ ದೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಸೃಷ್ಟಿ ಕೆ. ಏನ್. ಶೇ.80.96 (506/625) ದ್ವಿತೀಯ ಸ್ಥಾನ ಹಾಗೂ ವಿಜಯಲಕ್ಷ್ಮಿ.ಕೆ ಶೇ.78.56 (491/625) ಫಲಿತಾಂಶದೊಂದಿಗೆ ತೃತೀಯ ಸ್ಥಾನ ಪಡೆದಿದ್ದಾಳೆ. ಒಟ್ಟು 40 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 36 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಕಾರ್ಯದರ್ಶಿ ಎ.ಎಂ. ವಿಜಯ ಕುಮಾರ್, ಮುಖ್ಯೋಪಾಧ್ಯಾಯ ಟಿ. ಮಂಜುನಾಥ್ ಮತ್ತು ಸಿಬ್ಬಂದಿ, ಹಾಗೂ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.



ಅಂಬಿಕ ಗೊರವರ (ಶೇ.84)



ಸೃಷ್ಟಿ ಕೆ. ಏನ್. (ಶೇ.80.96)



ವಿಜಯಲಕ್ಷ್ಮಿ.ಕೆ (ಶೇ.78.56)